ಬೆಳಸಲಿಗೆ ಕೃತಿ ಸಂಪುಟ - 4

: ಯಕ್ಷಗಾನ ಪ್ರಸಂಗಗಳು :

❖ ಅಹಲ್ಯೋದ್ಧಾರ, ❖ ತ್ರಿಜನ್ಮ ಕಂಸಕೈವಲ್ಯ,
❖ ತ್ರಿಭುವನ ವಿಜಯ, ❖ ಕನ್ಯಾರತ್ನ, ❖ ಮಹಾಸತಿ ಮಂಡೋದರಿ

ಬೆಳಸಲಿಗೆ ಗಣಪತಿ ಹೆಗಡೆ

Scanned by CamScanner

ಬೆಳಸಲಿಗೆ ಕೃತಿ ಸಂಪುಟ – ೪

– ಯಕ್ಷಗಾನ ಪ್ರಸಂಗಗಳು –

* ಅಹಲ್ಯೋದ್ಧಾರ * ತ್ರಿಜನ್ಮ ಕಂಸಕೈವಲ್ಯ
* ತ್ರಿಭುವನ ವಿಜಯ * ಕನ್ಯಾರತ್ನ
* ಮಹಾಸತಿ ಮಂಡೋದರಿ

ಬೆಳಸಲಿಗೆ ಗಣಪತಿ ಹೆಗಡೆ

: ಪ್ರಕಾಶಕರು :

ದಿ|| ಬೆಳಸಲಿಗೆ ಗಣಪತಿ ಹೆಗಡೆ ಕೃತಿ ಪ್ರಕಾಶನ

ಎ. ಪಿ. ಎಂ. ಸಿ. ರಸ್ತೆ, ಸಿದ್ದಾಪುರ (ಉ. ಕ.) ೫೮೧ ೩೫೫

Scanned by CamScanner

BELASALIGE KRUTHI SAMPUTA - 4

By Belasalige Ganapathi Hegde.

Published by Late Belasalige Ganapathi Hegde Kruthi Prakashana, Siddapura (U. K.) 581 355

Printed at Chetana Sahakari Offset Mudranalaya, Sirsi - 581 401 ✆ 27002

Pages : xiv + 160

ಪೂರ್ಣಹಕ್ಕು : **ಶ್ರೀ ಸುರೇಶ ಗಣಪತಿ ಹೆಗಡೆ, ಬೆಳಸಲಿಗೆ**

ಚಿತ್ರ ವಿನ್ಯಾಸ : **ಶ್ರೀ ಸತೀಶ ಯಲ್ಲಾಪುರ**

ಬೆಲೆ : ರೂ. 70-00

ಪುಸ್ತಕಗಳು ದೊರೆಯುವ ಸ್ಥಳ -

ಶ್ರೀ ಸುರೇಶ ಗಣಪತಿ ಹೆಗಡೆ, ಬೆಳಸಲಿಗೆ

ಪೋ : **ಗೋಳಗೋಡು**

ಸಿದ್ದಾಪುರ (ಉ. ಕ.)

ಮುದ್ರಣ :

ದಿ ಚೇತನಾ ಪ್ರಿಂಟಿಂಗ್ ಆ್ಯಂಡ್ ಪಬ್ಲಿಶಿಂಗ್ ಕೋ-ಒಪ್. ಸೊಸೈಟಿ ಲಿ.,
ಶಿರಸಿ ೫೮೧ ೪೦೧ (ಉತ್ತರ ಕನ್ನಡ) ದೂರವಾಣಿ : ೨೭೦೦೨

ಎರಡು ಮಾತು....

ಬೆಳಸಲಿಗೆ ಕೃತಿ ಸಂಪುಟ - ೪ ನಿಮ್ಮ ಕೈಯಲ್ಲಿದೆ. ಇದರೊಂದಿಗೆ ಅವರ ಎಲ್ಲ ಅಪ್ರಕಟಿತ ಪ್ರಸಂಗಗಳು ಪ್ರಕಟವಾದಂತಾಯಿತು. ಈ ಸಂಪುಟದಲ್ಲಿ ಅವರ ಎಲ್ಲ ಕೃತಿಗಳ ಹೆಸರು ಹಾಗೂ ಅವುಗಳನ್ನು ಬರೆದ ವರ್ಷಗಳ ಪಟ್ಟಿ ಇದೆ. ಅವರ ಪರಿಚಯ ಇಲ್ಲದವರಿಗಾಗಿ ಶ್ರೀ ಎಂ. ಎ. ಹೆಗಡೆಯವರು ಬರೆದ ಬರಹವೊಂದನ್ನು ಸೇರಿಸಲಾಗಿದೆ. ಹಿರಿಯ ವಿದ್ವಾಂಸರಾದ ಡಾ|| ಎಂ. ಪ್ರಭಾಕರ ಜೋಶಿ ಹಾಗೂ ಶ್ರೀ ಕಾಶ್ಯಪ ಪರ್ಣಕುಟಿಯವರು ಬೆನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿದ್ದಾರೆ. ಹಿಂದಿನ ಸಂಪುಟದ ಮುಖಪುಟ ಹಾಗೂ ಒಳಗಿನ ಪುಟಗಳಲ್ಲಿ ಸುಂದರವಾದ ರೇಖಾಚಿತ್ರಗಳಿದ್ದವು. ಈ ಸಂಪುಟದಲ್ಲಿಯೂ ಇನ್ನಷ್ಟು ರೇಖಾಚಿತ್ರಗಳು ಪುಸ್ತಕದ ಅಂದವನ್ನು ಹೆಚ್ಚಿಸಿವೆ. ಪ್ರಸಿದ್ಧ ಚಿತ್ರಕಾರ ಶ್ರೀ ಸತೀಶ ಯಲ್ಲಾಪುರ ಅವರು ನಮಗಾಗಿ ಬರೆದುಕೊಟ್ಟವುಗಳು ಅವು. ಅಂದವಾದ ಮುದ್ರಣ ಚೇತನಾ ಸಹಕಾರಿ ಆಫ್‌ಸೆಟ್ ಮುದ್ರಣಾಲಯ, ಶಿರಸಿ ಅವರದು. ಶ್ರೀ ಪಿ. ವಿ. ಹೆಗಡೆ, ಕಂಪ್ಲಿ ಮತ್ತು ಸಿಬ್ಬಂದಿ ವರ್ಗದವರು ತುಂಬ ಮುತುವರ್ಜಿ ವಹಿಸಿದ್ದಾರೆ. ಕರಡಚ್ಚನ್ನು ತಿದ್ದುವಲ್ಲಿ ಶ್ರೀ ಎಂ. ಎಸ್. ಉಡುಪ ಅವರು ನೆರವಾಗಿದ್ದಾರೆ. ಇವರೆಲ್ಲರಿಗೆ ಕೃತಜ್ಞತೆಗಳು.

ಈ ಪ್ರಕಾಶನ ಸಂಸ್ಥೆ ೯-೧-೧೯೯೯ ರಂದು ರೂಪುಗೊಂಡಿತು. ಮೊದಲು ನಾವು ನೆರವನ್ನು ಯಾಚಿಸಿದ್ದು ಸಿದ್ದಾಪುರದ ಟಿ. ಎ. ಪಿ. ಸಿ. ಎಂ. ಎಸ್. ನ್ನು. ಅಂದು ಅಧ್ಯಕ್ಷರಾಗಿದ್ದವರು ಶ್ರೀ ಎ. ಪಿ. ಭಟ್ಟ, ಮುತ್ತಿಗೆ. ಅವರು ನೀಡಿದ ಪ್ರೋತ್ಸಾಹ ದೊಡ್ಡ ಟಾನಿಕ್. ಪುಸ್ತಕ ಪ್ರಕಟವಾಗುವಾಗ ಆಡಳಿತ ಮಂಡಳಿ ಬದಲಾಗಿ ಶ್ರೀ ಸೀತಾರಾಮ ಭಟ್ಟ, ಇಟಗಿಯವರು ಅಧ್ಯಕ್ಷರಾದರು. ಅವರು ಪ್ರೋತ್ಸಾಹವನ್ನು ಮುಂಧುವರಿಸಿದ್ದಾರೆ. ಹಾಗಾಗಿ ಹಿಂದಿನ ಹಾಗೂ ಇಂದಿನ ಆಡಳಿತ ಮಂಡಳಿಯನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಲ್ಲದೆ ಶಿರಸಿಯ ಚೇತನಾ ಸಹಕಾರ ಬ್ಯಾಂಕನ ಅಧ್ಯಕ್ಷ ಶ್ರೀ ಗಣೇಶ ಹೆಗಡೆ, ದೊಡ್ಮನೆ, ಬಿದ್ರಕಾನ ಸೇವಾ ಸಹಕಾರಿ ಬ್ಯಾಂಕ್‌ನ ಶ್ರೀ ಡಿ. ಜಿ. ಭಟ್ಟ, ಮುತ್ತಿಗೆ, ನಾಣಿಕಟ್ಟಾ ಸಹಕಾರಿ ಸಂಘದ ಅಧ್ಯಕ್ಷ ಶ್ರೀ ಎನ್. ಬಿ. ಹೆಗಡೆ, ಮತ್ತಿಹಳ್ಳಿ ಇವರು ಹಾಗೂ ಆಯಾ ಸಂಸ್ಥೆಗಳ ಆಡಳಿತ ಮಂಡಳಿಯವರು ನಮ್ಮ ಕೃತಜ್ಞತೆಗಳಿಗೆ ಪಾತ್ರರಾಗಿದ್ದಾರೆ.

ಈ ಸಂಪುಟದ ಪ್ರಾಯೋಜಕರಾಗಿ ನಮ್ಮನ್ನು ವಿಶೇಷವಾಗಿ ಪ್ರೋತ್ಸಾಹಿಸಿದ ಸಂಸ್ಥೆ ಶಿರಸಿಯ ತೋಟಗಾರ್ಸ್ ಸೊಸೈಟಿ. ಒಳ್ಳೆಯ ಕೆಲಸಕ್ಕೆ ನೆರವು ನೀಡುವಲ್ಲಿ

Scanned by CamScanner

ಮುಂಚೂಣಿಯಲ್ಲಿರುವ ಸತ್ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿರುವ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶಾಂತಾರಾಮ ಹೆಗಡೆ, ಶೀಗೇಹಳ್ಳಿ ಹಾಗೂ ಆಡಳಿತ ಮಂಡಳಿಗೆ ವಿಶೇಷವಾದ ಕೃತಜ್ಞತೆಗಳು ಸಲ್ಲುತ್ತವೆ.

ಕಟ್ಟಿದ ಮಾಲೆ ಮುಡಿಯುವವರ ಮುಡಿಯನ್ನು ಅಲಂಕರಿಸಿದರೆ ಚಂದ. ಕಟ್ಟಿದವನ ಶ್ರಮ ಸಾರ್ಥಕ. ಓದಿ ಮೆಚ್ಚುವ, ಮೆಚ್ಚಿ ಮೆರೆಸುವ ಕೆಲಸ ನಿಮ್ಮದು.

ಸಿದ್ದಾಪುರ
೦೧-೦೯-೨೦೦೦

ಪ್ರಕಾಶನ ಸಮಿತಿಯ ಪರವಾಗಿ,

ಆರ್. ಎಂ. ಹೆಗಡೆ, ಬಾಳೇಸರ — ಅಧ್ಯಕ್ಷ
ಎಂ. ಎ. ಹೆಗಡೆ, ಸಿದ್ದಾಪುರ — ಕಾರ್ಯದರ್ಶಿ
ಅನಂತ ಹೆಗಡೆ, ಕೊಳಗಿ — ಸದಸ್ಯರು
ನರಸಿಂಹ ಹೆಗಡೆ, ಹೆಬ್ಬಲಸು — ,,
ಚಿದಂಬರ ಹೆಗಡೆ, ಕೊಪ್ಪ — ,,
ಸುರೇಶ ಹೆಗಡೆ, ಬೆಳಸಲಿಗೆ — ,,

ಬೆಳಸಲಿಗೆ : ಒಂದು ನೆನಪು

- ಎಂ. ಎ. ಹೆಗಡೆ, ಸಿದ್ದಾಪುರ

ಬೆಳಸಲಿಗೆ (ಸಿದ್ದಾಪುರ) ತಾಲೂಕಿನ ಒಂದು ಪುಟ್ಟ ಹಳ್ಳಿ. ಸಿದ್ದಾಪುರದಿಂದ ೧೦-೧೨ ಕಿ. ಮೀ. ದೂರ. ಸಿದ್ದಾಪುರದಿಂದ ಹಾರ್ಸಿಕಟ್ಟಾ ಮಾರ್ಗವಾಗಿ ಸಿರ್ಸಿಗೆ ಹೋಗುವ ರಸ್ತೆಯ ಪಕ್ಕದಲ್ಲೇ ಇದೆ. ಬಹುತೇಕ ಮಲೆನಾಡಿನ ಹಳ್ಳಿಗಳಂತೆ ಇದೂ ಕೂಡ. ಆಚೆ-ಈಚೆ ಬೆಟ್ಟ - ಗುಡ್ಡಗಳು; ಮಧ್ಯದಲ್ಲೊಂದು ಕೋವು. ಅಲ್ಲಿ ಗದ್ದೆ-ತೋಟಗಳ ಹರವು. ಊರೆಂದರೆ ಒಂದೋ ಎರಡೋ ಮನೆಗಳು. ಬೆಳಸಲಿಗೆಯಲ್ಲಿದ್ದುದು ಒಂದೇ ಮನೆ. ಈಗ ಎರಡಾಗಿದೆಯಷ್ಟೆ ! ಗಣಪತಿ ಹೆಗಡೆಯವರ ಜನ್ಮಸ್ಥಳ ಅದು ಎಂಬುದು ವಿಶೇಷ.

ವಿಠ್ಠಪ್ಪ ಹೆಗಡೆ ಹಾಗೂ ಲಕ್ಷ್ಮಮ್ಮ ದಂಪತಿಗಳ ಮುದ್ದಿನ ಮಗ ಗಣಪತಿ. ೧೯೧೨ರಲ್ಲಿ ಹುಟ್ಟಿದ ಮಗ. ಈ ಏಕಮಾತ್ರ ಪುತ್ರನನ್ನು ಮಮತೆಯ ಮಹಾಪೂರವನ್ನೇ ಹರಿಸಿ ಬೆಳಸಿದಳು ತಾಯಿ ಲಕ್ಷ್ಮಮ್ಮ. ಮನೆಯಲ್ಲಿ ಸಾಕಷ್ಟು ಅನುಕೂಲವೂ ಇತ್ತು. ಮಗು ಬಹಳ ಹೊತ್ತು ಆಡುಹಾಸಿಗೆಯ ಮೇಲೆ ಮಲಗಿದರೆ ಒರಟು ನೆಲದ ಸ್ಪರ್ಶದಿಂದ ಗಾಸಿಯಾದೀತೋ ಎಂದು ತಿಳಿದು ಬೆಣ್ಣೆಯನ್ನು ಸವರುವ ತವಕ ತಾಯಿಗೆ. ಗಣಪತಿಯ ಬಾಲ್ಯದ ಜೀವನ ವೈಭವಪೂರ್ಣವಾಗಿಯೇ ಕಳೆಯಿತು. ತಂದೆ-ತಾಯಿಗಳ ಪ್ರೀತಿ-ಮಮತೆಗಳ ಅಮೃತಧಾರೆಯ ಸವಿಯನ್ನುಂಡು ಸುಪುಷ್ಟನಾಗಿ ಅರಳುತ್ತ ನಡೆದ.

ಅದು ಮಲೆನಾಡಿನ ಮನೆ ಮನೆಗಳಲ್ಲಿಯೂ ಮದ್ದಳೆಯು ಮೊಳಗುತ್ತಿದ್ದ ಕಾಲ. ಚಂಡೆ ಮದ್ದಳೆಗಳ ಸದ್ದು ಕಿವಿಗಳನ್ನು ತಟ್ಟುತ್ತಲೇ ಇರುತ್ತಿತ್ತು. ಹತ್ತಿರದ ಬಿದ್ರಕಾನಿನಲ್ಲಿ ಆಟದ ಮೇಳವೂ ಇತ್ತು. ಹಾಗಾಗಿ ಸಹಜವಾಗಿಯೇ ಚಂಡೆ ಮದ್ದಳೆಗಳ ಧ್ವನಿಗೆ ತೆರೆದ ಕಿವಿ ಅದರತ್ತ ಆಕರ್ಷಿತವಾಗುತ್ತಿತ್ತು. ಇವನಿಗೂ ಅದೇ ಸೆಳೆತ. ಕೇಳುವ - ನೋಡುವ ಸೆಳೆತವೇ ಆಗಿದ್ದರೆ ಯಾರ ಆಕ್ಷೇಪಣೆಯೂ ಇರುತ್ತಿರಲಿಲ್ಲ. ಸ್ವತಃ ಬಣ್ಣ ಹಚ್ಚುವುದಕ್ಕೆ ತೀವ್ರವಾದ ಪ್ರತಿರೋಧ. ಅದಕ್ಕೆ ಕಾರಣಗಳು ಹಲವಾರು. ಕಲಾವಿದರೂ ಅಂಥವರೇ. ಅವರ ವೈಭವವೇನಿದ್ದರೂ ರಂಗದ ಮೇಲೆ. ಈಚೆಗಿನ ಬದುಕು ಜಿಗುಪ್ಸೆ ತರುವಂಥದು. ಹಾಗಾಗಿ ಗೌರವಸ್ಥರ ಮನೆಯ ಮಕ್ಕಳು ಬಣ್ಣ ಹಚ್ಚಿದರೆಂದರೆ ಕೆಟ್ಟು ಹೋದರೆಂದೇ ಲೆಕ್ಕ. ಗಣಪತಿಗೆ ಬಣ್ಣ ಹಚ್ಚುವ ತವಕವಿದ್ದರೂ ಮನೆಯಲ್ಲಿ ತಾಯಿ, ಚಿಕ್ಕಪ್ಪಂದಿರ ವಿರೋಧದಿಂದಾಗಿ ಸುಮ್ಮನಿರಬೇಕಾಯಿತು.

Scanned by CamScanner

ಸುದೈವಕ್ಕೆ ತಾಳಮದ್ದಳೆಯ ಅರ್ಥದಾರಿಗಳ ಬಗೆಗೆ ಅಂಥ ಅನಾದರವಿರಲಿಲ್ಲ. ಅನೇಕ ಗೌರವಾನ್ವಿತರು ಕೂಟಗಳಲ್ಲಿ ಭಾಗವಹಿಸುತ್ತಿದ್ದರು. ಹಾಗಾಗಿ ತಾಳಮದ್ದಲೆಯಲ್ಲಿ ಅರ್ಥ ಹೇಳುವುದು ಪ್ರತಿಷ್ಠೆಯನ್ನು ಹೆಚ್ಚಿಸುವ ವಿಷಯವೇ ಆಗಿತ್ತು. ಬೆಳಸಲಿಗೆಗೆ ಸಮೀಪದಲ್ಲಿದ್ದ ಬಿದ್ರಕಾನ ಪಟೇಲ ಸುಬ್ರಾಯ ಭಟ್ಟರು ಅರ್ಥಗಾರಿಕೆಯಲ್ಲಿ ಗಣಪತಿಗೆ ಗುರುವಾದರು. ಅರ್ಥಗಾರಿಕೆಯ ಮರ್ಮವನ್ನೆಲ್ಲ ಉಪದೇಶಿಸಿದರು. ಅದೇ ಊರಿನವರಾದ ತುಪ್ಪದ ರಾಮಯ್ಯ ಹೆಗಡೆ ಪ್ರಸಿದ್ಧ ಭಾಗವತರಾಗಿದ್ದರು. ಅವರು ಹಾಡುಗಾರಿಕೆಯ ರೀತಿಯನ್ನು ತಿಳಿಸಿಕೊಟ್ಟರು. ಅವರಿಬ್ಬರ ನೆರವಿನಿಂದ ರಾಗ-ರಸ-ತಾಳ-ಲಯ ಅರ್ಥಗಾರಿಕೆಗಳಲ್ಲಿ ಗಣಪತಿ ಹೆಗಡೆ ಪರಿಣತರಾದರು. ಬೆಳಸಲಿಗೆ ಮಾಣಿಯ ಅರ್ಥ ಜನರನ್ನು ರಂಜಿಸಲಾರಂಭಿಸಿತು.

ಗಣಪತಿ ಹೆಗಡೆ ಸುಂದರ ಪುರುಷ. ಹದವಾದ ಎತ್ತರ; ಅಗಲವಾದ ಮುಖ; ಕೆಂಪು ಮಿಶ್ರಿತ ಬಿಳಿಯ ಬಣ್ಣ. ಆಗಲೇ ಒಳ್ಳೆಯ ಮಾತುಗಾರ. ರಂಗಭೂಮಿಗೆ ಹಾಳತವಾದ ಜನ. ಹಾಗಾಗಿ ಮಿತ್ರರು ಹುರಿದುಂಬಿಸಿದರು. ೧೮-೨೦ ನೆಯ ವಯಸ್ಸಿನವರೆಗೆ ಹಾಗೂ ಹೀಗೂ ಅದುಮಿಟ್ಟುಕೊಂಡ ಆಸೆಯು ಪ್ರಕಟವಾಗತೊಡಗಿತು. ಹಾಗಾಗಿ ಯಾರ ಮಾತನ್ನೂ ಕೇಳದೆ ಅಗ್ಗರ ಮಂಜಯ್ಯನವರಲ್ಲಿ ನೃತ್ಯವನ್ನು ಕಲಿತು ಬಣ್ಣ ಹಚ್ಚಿ ರಂಗಕ್ಕೆ ಧುಮುಕಿದರು. ನಾಯಕ-ಪ್ರತಿನಾಯಕ ಪಾತ್ರಗಳಲ್ಲಿ ಮಿಂಚಿದರು. ಸಾಕಷ್ಟು ಆಸ್ತಿಯೂ ಇತ್ತಾಗಿ ಅಂಜುವ ಅಗತ್ಯವಿರಲಿಲ್ಲ. ಮೇಳ ಕಟ್ಟಿದರು. ಬಯಲಾಟಗಳನ್ನಾಡುತ್ತಾ ಜಿಲ್ಲೆಯ ವಿವಿಧ ಭಾಗಗಳನ್ನು ಸಂಚರಿಸಿ ಜನರ ಮೆಚ್ಚುಗೆಯನ್ನು ಗಳಿಸಿದರು. ಬೇಸಿಗೆಯಲ್ಲಿ ಆಟ; ಮಳೆಗಾಲದಲ್ಲಿ ಕೂಟ. ಅವರ ಕಲಾಸೇವೆ ನಿರಂತರವಾಗಿ ಸುಮಾರು ಇಪ್ಪತ್ತೈದು ವರ್ಷಗಳಷ್ಟು ಕಾಲ ಸಾಗಿತು.

ಮನೆಯಲ್ಲಿ ಆಸ್ತಿಗೆ ಬರವಿರಲಿಲ್ಲ. ಉಸ್ತುವಾರಿಗೆ ಜನರಿರಲಿಲ್ಲ. ಮದುವೆಯೂ ಆಗಿತ್ತು; ಮಕ್ಕಳೂ ಇದ್ದರು. ಅವರನ್ನು ಗಮನಿಸುವುದಕ್ಕೂ ವಿರಾಮವಿಲ್ಲ. ಹಗಲಿರುಳೂ ಯಕ್ಷಗಾನದ್ದೇ ಧ್ಯಾನ. ಇದರಿಂದ ಪ್ರಾಪ್ತಿಯೇನು? ಬಾಯ್ತುಂಬ ಪ್ರಶಂಸೆಯ ಮಾತುಗಳು. ಕೈಯಿಂದ ಖರ್ಚು ಮಾಡಿಕೊಂಡು ಪ್ರಯಾಣ ಮಾಡಿ ಬೆಳಗಿನತನಕ ಅರ್ಥ ಹೇಳಿ ಜನರನ್ನು ರಂಜಿಸಿದವರಿಗೆ ಸಿಗುವ ಪ್ರತಿಫಲವೆಂದರೆ ವೀಳ್ಯದೆಲೆ-ಅಡಿಕೆ; ಬಾಯ್ತುಂಬ ಹೊಗಳಿಕೆ. ಆಟ ಕುಣಿವವರಿಗೆ ಬಣ್ಣದ ಖರ್ಚು ಸಿಕ್ಕುವುದೇ ದೊಡ್ಡದು. ಹೀಗಾಗಿ ಆರ್ಥಿಕ ಸ್ಥಿತಿ ದಿನದಿಂದ ದಿನಕ್ಕೆ ಕೆಡುತ್ತ ಬಂತು. ಹೊಟ್ಟೆಯ ಹಿಟ್ಟಿಗೂ ತುಟ್ಟಿಯಾಯಿತು. ಕಲೆಯ ಗೀಳು ಮನೆಯವರ ಗೋಳಾಯಿತು. ಹಾಳುಬಿದ್ದ ತೋಟ,

ಉಳುವವರಿಲ್ಲದ ಗದ್ದೆಗಳನ್ನು ನೋಡುತ್ತಿದ್ದಂತೆ ಆವರಿಸಿದ್ದ ಮಬ್ಬು ಇಳಿಯಲಾರಂಭಿಸಿತು. ಗಣಪತಿ ಹೆಗಡೆ ಬಣ್ಣದ ಬದುಕಿಗೆ ವಿದಾಯ ಹೇಳಿ ಮನೆ ಸೇರಿದರು.

ಆದರೆ ಯಕ್ಷಗಾನ ಅವರ ಜೀವಕ್ಕೆ ಅಂಟಿದ ನಂಟು; ಜನ್ಮಾಂತರದ ಗಂಟು. ಅದರಿಂದ ದೂರವಿರಲಾಗಲಿಲ್ಲ. ಆಟವನ್ನು ಬಿಟ್ಟರೂ ಕೂಟವನ್ನು ಬಿಡಲಿಲ್ಲ. ಅರ್ಥದಾರಿಯಾಗಿ ಕರೆದಲ್ಲಿಗೆ ಹೋಗುವ ಪರಿಪಾಠವನ್ನು ಬಿಡಲಿಲ್ಲ. ಹಗಲೆಲ್ಲ ಗೆಯ್ದು ರಾತ್ರಿಯಾಗುತ್ತಲೇ ತಾಳಮದ್ದಲೆಯಿರುವಲ್ಲಿಗೆ ಹೋಗುವುದು; ಮತ್ತೆ ಮರುದಿನ ಬೆಳಗಾಗುತ್ತಲೇ ಬಂದು ದುಡಿಯುವುದು. ಹರಯ ಇಳಿಮುಖವಾಯಿತು; ಆರೋಗ್ಯ ಕುಂದಿತು. ಆದರೆ ಕೊನೆಯವರೆಗೂ ಅವರ ಉತ್ಸಾಹ ಕುಂದಲಿಲ್ಲ; ಕಲೆಯ ಮೇಲಿನ ಪ್ರೀತಿ ಇಳಿಮುಖವಾಗಲಿಲ್ಲ. ಕರೆದಲ್ಲಿಗೆ ಬರುವುದಿಲ್ಲವೆಂದು ಹೇಳುವುದು ಅವರಿಂದಾಗುತ್ತಿರಲಿಲ್ಲ. ಹಾಗಾಗಿ ಕರೆಯುವವರೇ ಹಿಂದೆ ಸರಿಯಬೇಕಾಗಿ ಬಂತು.

ಬೆಳಸಲಿಗೆ ತುಂಬ ಶಿಸ್ತುಗಾರ. ಬಿಳಿಯ ಲುಂಗಿ, ಬಿಳಿಯ ಜುಬ್ಬ. ಬಟ್ಟೆಯ ಬಿಳುಪು ನಸುವೂ ಮಾಸಕೂಡದು; ನೆರಿಗೆ ಬೀಳಕೂಡದು - ಎನ್ನುವಷ್ಟು ಅಚ್ಚುಕಟ್ಟು; ಎಚ್ಚರಿಕೆ. ಅಗಲವಾದ ಮುಖ; ಅದಕ್ಕೊಪ್ಪುವ ತಿದ್ದಿ - ತೀಡಿದ ಮೀಸೆ; ಗತ್ತು-ಗಾಂಭೀರ್ಯಗಳ ನಡೆ-ನುಡಿ. 'ಬೆಳಸಲಿಗೆ ಕೌರವ' ನೆಂದೇ ಖ್ಯಾತಿ. ಅದು ನಿಂದೆಯೂ ಹೌದು; ಪ್ರಶಂಸೆಯೂ ಹೌದು. ತಾಳಮದ್ದಳೆಗೆ ಅವರು ಹೋದರೆಂದರೆ ಆಯಿತು. ಅವರಿಗೆ ಹಿರಿತನದ ಗೌರವವನ್ನು ಸಲ್ಲಿಸಲೇಬೇಕು. ಅವರು ಬಯಸಿದ ಪಾತ್ರ ಅವರಿಗೆ. ಇತರರು ಅವರನ್ನು ಹೊಂದಿಕೊಂಡು ಹೋಗಬೇಕು ಎಂಬ ಧೋರಣೆ. ಇದು ಎಷ್ಟೋಸಲ ಘರ್ಷಣೆಗೆ ಎಡೆ ಮಾಡಿಕೊಟ್ಟಿತು. ಅಂಥಲ್ಲಿ ಪ್ರತಿಷ್ಠೆ ಮುಂದಾಗಿ ಪ್ರಸಂಗ ಹಿಂದೆ ಸರಿದುದೂ ಉಂಟು. ಪ್ರೇಕ್ಷಕರೋ, ಮನೆಯ ಯಜಮಾನರೋ ಮಧ್ಯ ಪ್ರವೇಶಿಸಿದ ಸಂದರ್ಭಗಳೂ ಉಂಟು.

ಬೆಳಸಲಿಗೆಯವರ ನಿರ್ದಾಕ್ಷಿಣ್ಯ ಪ್ರವೃತ್ತಿ ಅವರನ್ನು ಜನರಿಂದ ದೂರವಿರಿಸಿತು. ಅವರಿಗೆ ಅನಿಸಿದ್ದನ್ನು ಹೇಳುವಾಗ ಹಿಂದೆ-ಮುಂದೆ ನೋಡುವ ಸ್ವಭಾವವಿರಲಿಲ್ಲ. ಹಾಗೆ ಹೇಳಿದ್ದರಿಂದ ಬೇರೆಯವರಿಗೆ ನೋವಾದೀತೆಂಬುದನ್ನು ಗಣಿಸುತ್ತಿರಲಿಲ್ಲ. ಅವರ ಈ ನೇರ ನುಡಿಗಳಿಂದ ಜನರ ನಿಷ್ಠುರ ಕಟ್ಟಿಕೊಂಡರು. ಹೆಚ್ಚಿನವರು ಅವರ ಮಾತುಗಳನ್ನು ಮಾತ್ರ ಗಮನಿಸಿದರು. ಆ ಒರಟು ಮಾತುಗಳ ಹಿಂದಿರುವ ಬೆಣ್ಣೆಯಂಥ ಹೃದಯವನ್ನು ಕಾಣಲಿಲ್ಲ. ಅವರಿಂದ ದೂರ ಸರಿದರು. ಅವರ ಅಂತರಂಗ ತುಂಬ ಪರಿಶುದ್ಧವಾದುದೆಂಬುದು ಅವರ ನಿಕಟವರ್ತಿಗಳಿಗೆ ಗೊತ್ತಿತ್ತು. ಅವರು ತಾವು ಮಾತ್ರ

Scanned by CamScanner

ಖಂಡಿತವಾದಿಗಳಾಗಿರಲಿಲ್ಲ. ಇತರರಿಂದಲೂ ಅದೇ ಸ್ವಭಾವವನ್ನು ನಿರೀಕ್ಷಿಸುತ್ತಿದ್ದರು. ಅವರೊಂದಿಗೆ ಸುದೀರ್ಘಕಾಲದ ಒಡನಾಟ ನನಗಿದೆಯಾದ್ದರಿಂದ ಈ ಮಾತನ್ನು ಧೈರ್ಯವಾಗಿ ಹೇಳಬಲ್ಲೆ. ನಾನು ಅವರೊಂದಿಗೆ ನಿರ್ಭಿಡೆಯಿಂದ ವ್ಯವಹರಿಸಿದ್ದೇನೆ. ಅನೇಕ ಬಾರಿ ಜಗಳ ಕಾದಿದ್ದೇನೆ. ಆದರೆ ಇದರಿಂದ ನಮ್ಮ ನಡುವಣ ಬಾಂಧವ್ಯಕ್ಕೆ ಬಿರುಕು ಬಿಡಲಿಲ್ಲ. ಬದಲಿಗೆ ವಿಶ್ವಾಸವು ಅಧಿಕವಾಯಿತು. ದುರ್ದೈವದಿಂದ ಅವರು ಬದುಕಿರುವಷ್ಟು ಕಾಲವೂ ಅವರನ್ನು ಅರ್ಥ ಮಾಡಿಕೊಂಡವರಿಗಿಂತ ಅಪಾರ್ಥ ಮಾಡಿಕೊಂಡವರೇ ಹೆಚ್ಚು.

ಹೆಗಡೆಯವರಿಗೆ ಇಬ್ಬರು ಹೆಂಡಿರು. ಮೊದಲನೆಯ ಹೆಂಡತಿ ಇಬ್ಬರು ಹೆಣ್ಣು ಮಕ್ಕಳನ್ನೂ, ಒಬ್ಬ ಗಂಡು ಮಗನನ್ನೂ ಹಡೆದು ಮೃತರಾದರು. ಅನಂತರ ಎರಡನೆಯ ಮದುವೆಯಾಯಿತು. ಪತ್ನಿ ಜೀವಂತವಾಗಿದ್ದಾರೆ. ಅವರಿಗೆ ಒಬ್ಬ ಗಂಡುಮಗ, ಮೂವರು ಹೆಣ್ಣುಮಕ್ಕಳು. ಹಿರಿಯ ಮಗ ಪದ್ಮನಾಭ ತಂದೆಯಿಂದ ಬೇರೆಯಾಗಿದ್ದರೆ, ಕಿರಿಯ ಮಗ ಸುರೇಶ ತಂದೆಯನ್ನು ಕೊನೆಗಾಲದವರೆಗೆ ಚೆನ್ನಾಗಿ ನೋಡಿಕೊಂಡರು. ಅವರು ಅನಾರೋಗ್ಯದಿಂದ ಹಾಸಿಗೆ ಹಿಡಿದಾಗ ಮಗ ಸುರೇಶ ಹಾಗೂ ಸೊಸೆ ಗೀತಾ ತುಂಬ ಶ್ರದ್ಧೆಯಿಂದ ಸೇವೆ ಮಾಡಿದರು. ಆ ಮಟ್ಟಿಗೆ ಗಣಪತಿ ಹೆಗಡೆ ಪುಣ್ಯವಂತರೇ ಸರಿ.

ಬೆಳಸಲಿಗೆಯವರಿಗೆ ಯಕ್ಷಗಾನವೆಂದರೆ ಜೀವ. ದಿನವಿಡೀ ಅದನ್ನು ಕುರಿತು ಚಿಂತಿಸುವುದು ಅವರ ಪ್ರವೃತ್ತಿ. ಆಟ-ಕೂಟಗಳ ಅಬ್ಬರವಿಳಿದಾಗ ಪ್ರಸಂಗ ರಚನೆಗೆ ತೊಡಗಿಕೊಂಡರು. ಮನೆಯಲ್ಲಿ ತಾಳ-ಮದ್ದಳೆಗಳಿವೆ. ಯಾರಾದರೂ ಬಂದರೆ ತಾಳಮದ್ದಳೆಯಾಗುತ್ತಿತ್ತು. ಅವರಿಗೆ ಕೇಳುವ ಜನರು ಬೇಕೆಂದಿರಲಿಲ್ಲ. ಅಂತೆಯೇ ವರ್ಷದಲ್ಲಿ ಅನೇಕ ಬಾರಿ ಅವರ ಮನೆಯಲ್ಲಿಯೇ ಕೂಟದ ಏರ್ಪಾಡು. ಇವುಗಳ ಜೊತೆಗೆ ಗಣೇಶ ಚೌತಿಯ ಸಮಯದಲ್ಲಿ ಇತರ ಕಲಾವಿದರನ್ನು ಆಮಂತ್ರಿಸಿ ತಾಳಮದ್ದಳೆಯನ್ನು ಏರ್ಪಡಿಸುತ್ತಿದ್ದರು. ಅದೊಂದು ಸಾರ್ವಜನಿಕ ಸಮಾರಂಭ. ಗಣೇಶನ ವ್ರತವನ್ನು ನಿಷ್ಠೆಯಿಂದ ನಡೆಸುವಂತೆ ತಾಳಮದ್ದಳೆಯನ್ನೂ ನಡೆಸಿಕೊಂಡು ಬಂದರು. ಅವರ ಮಗ ಸುರೇಶ ತಂದೆಯ ಶ್ರಾದ್ಧದ ದಿನ ತಾಳಮದ್ದಳೆಯ ಕಾರ್ಯಕ್ರಮವನ್ನು ನಡೆಸುತ್ತಿದ್ದಾರೆ.

ಹೆಗಡೆಯವರು ಚೌತಿಯ ಸಮಯದಲ್ಲಿ ನಮಸ್ಕರಿಸಲು ಬಾಗಿದವರು ಬಿದ್ದು ಕಾಲಿಗೆ ಪೆಟ್ಟಾಯಿತು. ಎಲುಬಿಗೆ ಬಿರುಕು ಬಂದಿದ್ದರಿಂದ ಬ್ಯಾಂಡೇಜ್ ಹಾಕಲಾಗಿತ್ತು. ಅವರಿಗೆ ಪೆಟ್ಟಾದುದರಿಂದ ಆ ವರ್ಷ ತಾಳಮದ್ದಳೆಯನ್ನು ಮುಂದೆ ಹಾಕಿದರು. ಇದು ಆಸ್ಪತ್ರೆಯಲ್ಲಿದ್ದ ಹೆಗಡೆಯವರಿಗೆ ಗೊತ್ತಿರಲಿಲ್ಲ. ಅಲ್ಲಿಂದ ಬಿಡುಗಡೆ ಮಾಡಿಸಿಕೊಂಡು

ಮನೆಗೆ ಬಂದರು. ಮನೆಗೆ ಬಂದಮೇಲೆ ತಾಳಮದ್ದಳೆಯಿಲ್ಲವೆಂಬುದು ಗೊತ್ತಾಯಿತು. ರೌದ್ರಾವತಾರ ತಾಳಿದರು. ತಾನು ಜೀವಂತವಾಗಿರುವಾಗಲೇ ಕಾರ್ಯಕ್ರಮವನ್ನು ರದ್ದುಗೊಳಿಸಿದ್ದಾರೆಂದು ಆಕ್ಷೇಪ. ಕಾಲನ್ನು ಮಡಚಿ ಕೂಡ್ರಲು ಸಾಧ್ಯವಿಲ್ಲದಿದ್ದರೂ ಮಲಗಿಕೊಂಡೇ ಕೇಳಬಹುದಾಗಿತ್ತೆಂದು ಪೇಚಾಡಿದರು. ಗುಣಮುಖರಾದ ಮೇಲೆ ಕಾರ್ಯಕ್ರಮವನ್ನು ನಡೆಸುವುದಾಗಿ ಆಶ್ವಾಸನೆ ಕೊಟ್ಟು ಸಮಾಧಾನ ಗೊಳಿಸಬೇಕಾಯಿತು. ಅನಂತರ ಅವರು ಗುಣ ಹೊಂದಲಿಲ್ಲ. ಕೆಲವೇ ದಿನಗಳಲ್ಲಿ ಮೃತರಾದರು. ಅನಂತರ ಹನ್ನೆರಡನೆಯ ದಿನದಂದು ತಾಳಮದ್ದಳೆ ನಡೆಯಿತು. ಈಗ ಅವರ ಸಂಸ್ಮರಣಾರ್ಥ ಶ್ರಾದ್ಧದ ದಿನದಂದು ನಡೆಯುತ್ತಿದೆ. ಅವರ ಯಕ್ಷಗಾನ ಪ್ರೀತಿಗೆ ಇಂಥ ಹಲವಾರು ನಿದರ್ಶನಗಳಿವೆ. ಅವೆಲ್ಲವನ್ನೂ ದಾಖಲಿಸುವುದಕ್ಕೆ ಪ್ರತ್ಯೇಕ ಗ್ರಂಥವೇ ಬೇಕಾದೀತು.

ಅವರ ಅರ್ಥಗಾರಿಕೆ ಭಾವ ಪ್ರಧಾನವಾದುದು. ರಸ-ಭಾವಗಳ ಯಥೋಚಿತ ನಿರೂಪಣೆಯೇ ಯಕ್ಷಗಾನದ ಗುರಿಯೆಂದು ನಂಬಿದವರು ಅವರು. ವೈಚಾರಿಕತೆಯೇನಿದ್ದರೂ ಭಾವಗಳಿಗೆ ಅಡಿಯಾಳಾಗಿ ಬರಬೇಕೆಂಬುದು ಅವರ ಖಚಿತವಾದ ನಿಲುವು. ಆ ದೃಷ್ಟಿಯಿಂದಲೇ ಅವರು ಮಾತುಗಳನ್ನು ಯೋಚಿಸುತ್ತಿದ್ದರು. ಮಾತು ಹಿತ-ಮಿತವಾಗಿರಬೇಕೆಂಬುದು ಅವರ ಅಪೇಕ್ಷೆ. ಅವರ ಮನೆಯಲ್ಲಿ ನಡೆವ ತಾಳಮದ್ದಳೆಗಳಲ್ಲಿ ಮಾತು ಅಧಿಕವಾದರೆ ದೊಡ್ಡದಾಗಿ ಆಕಳಿಸುವ ಮೂಲಕ ಎಚ್ಚರಿಸುತ್ತಿದ್ದರು. ಅದು ಅರ್ಥವಾಗಲಿಲ್ಲವೆನ್ನುವಾಗ ಬಾಯ್ಬಿಟ್ಟು ಹೇಳುವುದಕ್ಕೂ ಹಿಂದೆ-ಮುಂದೆ ನೋಡುತ್ತಿರಲಿಲ್ಲ. ಅನಗತ್ಯವಾಗಿ ಮಾತು ಬೆಳೆಸುವುದರಿಂದ ರಸಾಭಾಸವಾಗುತ್ತದೆಯೆಂಬುದು ಅವರ ಧೋರಣೆ. ಒಂದೊಂದು ಮಾತೂ ಭಾವಪೂರ್ಣವಾಗಿರಬೇಕು. ಅಭಿನಯ ಸಮೇತವಾಗಿದ್ದರೆ ಚಂದ. ತಾಳಮದ್ದಳೆ ಯಾದರೂ ಸಂಧಾನದ ಕೌರವ ಪೀಠದಿಂದ ಬಿದ್ದನೆಂಬಾಗ ಅವರು ತಲೆಯನ್ನು ನೆಲಕ್ಕೆ ಹಚ್ಚಿಕೊಂಡಿರುತ್ತಿದ್ದರು. ಆದರೆ ಹಸ್ತಾಭಿನಯ ವಿಪರೀತವಾಗಿರಲಿಲ್ಲ. ರಸ-ಭಾವಗಳ ನಿರಂತರತೆಯನ್ನು ಕಾಯ್ದುಕೊಳ್ಳುವುದಕ್ಕೆ ಸೀಮಿತವಾಗಿರುತ್ತಿತ್ತು.

ಅವರು ಪ್ರತಿಯೊಂದು ಪಾತ್ರವನ್ನೂ ಗಂಭೀರವಾಗಿಯೇ ಸ್ವೀಕರಿಸು ವಂಥವರು. ಕಾರ್ಯಕ್ರಮವು ಪುಟ್ಟದಾಗಿರಲಿ, ದೊಡ್ಡದಾಗಿರಲಿ ಅದನ್ನು ಗಣಿಸುವವರಲ್ಲ. ಒಂದು ಪ್ರಸಂಗದಲ್ಲಿ ಅವರು ನಿರುತ್ತರರಾಗುವ ಸಂದರ್ಭವೊದಗಿದರೆ ಮಾರನೆಯ ದಿನದಿಂದ ಉತ್ತರ ಶೋಧಿಸುವ ಕೆಲಸದಲ್ಲಿ ನಿರತರಾಗುತ್ತಿದ್ದರು. ಸಮರ್ಪಕವಾದ ಉತ್ತರ ದೊರೆತ ಹೊರತು ತೃಪ್ತಿಯಿಲ್ಲ. ಒಂದೊಂದು ಪದ್ಯದ ಬಗೆಗೂ ಗಾಢವಾಗಿ ಚಿಂತಿಸಿ ಆ ಪದ್ಯದ ಅರ್ಥವನ್ನು ಹೀಗೆಯೇ ಹೇಳಬೇಕೆಂದು ತೀರ್ಮಾನಿಸಿಕೊಂಡು ಮುನ್ನಡೆವುದು ಅವರ ಸ್ವಭಾವ.

Scanned by CamScanner

ಈ ಪೂರ್ವ ಸಿದ್ಧತೆಯ ಕಾರಣದಿಂದ ಅವರ ಅರ್ಥ ಹೆಚ್ಚಿನ ಪರಿಣಾಮವನ್ನು ಬೀರಬಲ್ಲುದಾಗಿತ್ತು.

ಅವರದು ನೇರವಾದ ದಾರಿ. ಪದ್ಯದ ಅರ್ಥವನ್ನು ಹೇಳುವಾಗ ಮುಂದಿನ ಪದ್ಯದ ಅರ್ಥ ಹಿಂದೆಯೇ ಬರಕೂಡದು. ನಮ್ಮ ಮಾತಿನಿಂದ ಎದುರಾಳಿಯು ಪದ್ಯದ ಅರ್ಥವನ್ನು ಹೇಳುವುದಕ್ಕೆ ತೊಡಕಾಗಕೂಡದು. ಎದುರಾಳಿಯ ಬಾಯಿ ಕಟ್ಟಿಸುವುದಕ್ಕೆ ಅಂಥ ಪ್ರಯತ್ನಕ್ಕೆ ತೊಡಗುವುದನ್ನು ಕಂಡರೆ ಅವರಿಗೆ ಕೋಪ. ಭಾಗವತನು ಯಾರ ಪದ್ಯವನ್ನು ಹೇಳಿರುತ್ತಾನೋ ಅವನೇ ಆ ಪದ್ಯದ ಅರ್ಥವನ್ನು ಹೇಳಬೇಕು. ತನ್ನ ಮಾತು ಮುಗಿದಿಲ್ಲವಾಗಿದ್ದರೂ ಎದುರಾಳಿಯು ಪದ್ಯದ ಅರ್ಥವನ್ನು ಹೇಳುವವರೆಗೆ ಕಾಯಬೇಕು. ಯಾವುದೇ ಸಮಯದಲ್ಲಿ ಪ್ರಸಂಗದ ಪಠ್ಯವನ್ನು ಅತಿಕ್ರಮಿಸಬಾರದು. ಅಂದರೆ ಪ್ರಸಂಗಕ್ಕೆ ವಿರುದ್ಧವಾದುದನ್ನು ತರಕೂಡದು. ಮುಂತಾಗಿ ಅನೇಕ ನಿಯಮಗಳನ್ನು ಚಾಚೂ ತಪ್ಪದಂತೆ ಪಾಲಿಸುತ್ತಿದ್ದರು. ಒಂದು ವೇಳೆ ಇತರರು ನಿಯಮವನ್ನು ತಪ್ಪಿದರೆ ಅದನ್ನು ನೆನಪಿಸುವುದಕ್ಕೆ ಸಂಕೋಚ ಪಡುತ್ತಿರಲಿಲ್ಲ. ಅವರ ಈ ನಿಯಮ ನಿಷ್ಠೆಯ ಕಾರಣದಿಂದಲೇ ಕೆಲವೊಮ್ಮೆ ಕೂಟದ ಮಧ್ಯದಲ್ಲಿ ಗದ್ದಲವೆದ್ದ ಸಂದರ್ಭಗಳೂ ಉಂಟು.

ಅವರು ಒಂದು ಪದ್ಯದಿಂದ ಇನ್ನೊಂದು ಪದ್ಯಕ್ಕೆ ಜಾರುವ ರೀತಿ ತುಂಬ ಆಕರ್ಷಕವಾಗಿರುತ್ತಿತ್ತು. ಇದಕ್ಕೆ ಸಂದರ್ಭ ಕೊಡುವುದು ಎನ್ನುತ್ತಾರೆ. ಒಂದು ಪದ್ಯವು ಇನ್ನೊಂದು ಪದ್ಯಕ್ಕೆ ದಾರಿ ಮಾಡಿಕೊಡಬೇಕು. ಅದು ಅತ್ಯಂತ ಸಹಜವಾಗಿರಬೇಕೆಂಬುದು ಅಪೇಕ್ಷಿತ. ಒಂದು ಪದ್ಯಕ್ಕೆ ಹೇಳಿದ ಅರ್ಥದ ಮಾತಿನಿಂದಲೇ ಮತ್ತೊಂದು ಪದ್ಯವು ಹುಟ್ಟಿತೆಂಬಂತೆ ಇರುವುದು ಸಂದರ್ಭದ ವೈಶಿಷ್ಟ್ಯ. ಇದಕ್ಕೆ ವಿಶೇಷವಾದ ತರಬೇತಿ-ಪರಿಣತಿಗಳು ಅವಶ್ಯ. ಬೆಳಸಲಿಗೆಯವರು ಅತ್ಯುತ್ತಮ ಸಂದರ್ಭದಾರಿಯಾಗಿದ್ದರು. ಅದು ಅಭ್ಯಾಸದ ಫಲ.

ಬೆಳಸಲಿಗೆಯವರ ಕವಿತ್ವಶಕ್ತಿ ಪ್ರಕಟಗೊಂಡುದು ಸುಮಾರು ೧೯೫೦ ರಲ್ಲಿ ಎನ್ನಬಹುದು. ಸುಮಾರು ಇಪ್ಪತ್ತು-ಇಪ್ಪತ್ತೈದು ವರ್ಷಗಳ ಕಾಲ ಯಕ್ಷಗಾನದ ವಿವಿಧ ಅಂಗಗಳ ಅನುಭವ ಪಡೆದ ಮೇಲೆ ಅವರು ಪ್ರಸಂಗ ರಚನೆಗೆ ಕೈ ಹಾಕಿದರು. 'ಸಮಗ್ರ ಭಾರತ ' ಅರ್ಥಾತ್ 'ಕುರುಕ್ಷೇತ್ರ,' ವೆಂಬುದು ಅವರ ಮೊದಲ ಕೃತಿ. ಆ ಪ್ರಸಂಗ ಅವರಿಗೆ ಸಾಕಷ್ಟು ವಿಶ್ವಾಸವನ್ನು ಮೂಡಿಸಿತು. ತಾನು ಪ್ರಸಂಗವನ್ನು ಬರೆದಿದ್ದೇನೆಂದು ಹೇಳಿದಾಗ ಹುಬ್ಬೇರಿಸಿದವರು ಪ್ರಸಂಗವನ್ನೋದಿದಮೇಲೆ ತಲೆದೂಗಿದರು; ಹುರಿದುಂಬಿಸಿದರು. ಅನಂತರ 'ಸಂಪೂರ್ಣ ರಾಮಾಯಣ' ವು ಪ್ರಕಟಗೊಂಡಿತು. ೧೯೫೦ ರಿಂದ ೧೯೫೯ ರ ಅವಧಿಯಲ್ಲಿ ಐದು ಪ್ರಸಂಗಗಳು ರಚನೆಗೊಂಡವು. ಅನಂತರ ೧೯೭೮ ರವರೆಗೆ ದೀರ್ಘ ವಿರಾಮ. ೧೯೭೯ ರಿಂದ ೮೯ ರವರೆಗಿನ ಹತ್ತು

ವರ್ಷಗಳಲ್ಲಿ ೧೯ ಪ್ರಸಂಗಗಳ ರಚನೆಯಾಯಿತು.

೧೯೭೮ ರಿಂದ ಅವರ ತಿರುಗಾಟಗಳು ತುಂಬ ಕಡಿಮೆಯಾದವು. ಶರೀರದ ಸ್ಥಿತಿಯೂ ಚೆನ್ನಾಗಿರಲಿಲ್ಲ. ಆ ಕಾರಣದಿಂದ ತಾಳಮದ್ದಳೆಗೆ ಹೋಗುವುದು ಕಡಿಮೆಯಾಯ್ತು. ಹೆಚ್ಚುಕಡಿಮೆ ಮನೆಯಲ್ಲಿಯೇ ಇರಬೇಕಾಯಿತು. ಅದನ್ನು ಅವರು ಪ್ರಸಂಗ ರಚನೆಗೆ ಬಳಸಿಕೊಂಡರು. ಹೊಸ ಕಥೆಗಳ ಶೋಧನೆ, ಪ್ರಸಂಗ ರಚನೆಗಳು ಒಂದೇ ಸವನೆ ನಡೆದವು. ೧೯೮೯ ರ ನಂತರ ಕಣ್ಣು ಮಂಜಾಯಿತು. ಬರೆಯುವದಾಗಲಿ, ಓದುವುದಾಗಲಿ ಸಾಧ್ಯವಾಗುತ್ತಿರಲಿಲ್ಲ. ಅವರು ಹೇಳಿದ್ದನ್ನು ಬರೆದುಕೊಳ್ಳುವವರೂ ಇರಲಿಲ್ಲ. ಹಾಗಾಗಿ ಪ್ರಸಂಗ ರಚನೆ ನಿಂತಿತು. ಆದರೂ ಆ ಅವಧಿಯಲ್ಲಿ ಅವರು ಅನೇಕ ಸ್ತುತಿ ಪದ್ಯಗಳನ್ನು ರಚಿಸಿದ್ದಾರೆ. ಬರೆದುಕೊಳ್ಳುವವರು ಸಿಕ್ಕಾಗ ಹೇಳಿ ಬರೆಸಿದ್ದಾರೆ. ಮುಂದೆ ಆರೋಗ್ಯವು ಮತ್ತಿಷ್ಟು ಬಿಗಡಾಯಿಸಿದಾಗ ಯಕ್ಷಗಾನಕ್ಕೆ ಸಂಬಂಧಿಸಿದ ಮಾತು ಕಥೆಯೇ ಅವರಿಗೆ ಚೇತನದಾಯಕವಾಗಿರುತ್ತಿತ್ತು. ಅಂಥ ಆತ್ಮೀಯರೊಂದಿಗೆ ಕಾಲ ಕಳೆಯುವ ಸಮಯದಲ್ಲಿ ಮಾತ್ರ, ಅವರು ಅತ್ಯಂತ ಲವಲವಿಕೆಯಿಂದ ಕಾಲ ಕಳೆಯುತ್ತಿದ್ದರು. ಅವರ ಪ್ರಸಂಗಗಳಲ್ಲಿ ಅತಿ ಹೆಚ್ಚಿನ ಪ್ರದರ್ಶನಗಳನ್ನು ಕಂಡ ಕೃತಿ ''ವಸಂತಸೇನಾ''. ಮೂರೂರ ದೇವರು ಹೆಗಡೆಯವರ ಒತ್ತಾಸೆಯಂತೆ ಶೂದ್ರಕನ ಮೃಚ್ಛಕಟಿಕವನ್ನು ಯಕ್ಷಗಾನಕ್ಕೆ ಇಳಿಸಿದರು. ಆ ಕೃತಿ ಸಾವಿರಾರು ಪ್ರಯೋಗಗಳನ್ನು ಕಂಡು ಯಕ್ಷಗಾನದ ಪ್ರಸಿದ್ಧ ಪ್ರಸಂಗಗಳ ಸಾಲಿಗೆ ಸೇರಿದೆ. ಲಲಿತ ಮಧುರವಾದ ಪದ್ಯ ರಚನೆಯು ಕವಿಯ ಶಕ್ತಿಯನ್ನು ಸಾರುತ್ತಿದೆ. ಬೆಳಸಲಿಗೆಯವರ ಶ್ರೇಷ್ಠತೆಯನ್ನು ಸಾಬೀತುಪಡಿಸಲು ಅದೊಂದೇ ಕೃತಿಯಿದ್ದರೂ ನಡೆಯುತ್ತಿತ್ತು. ಪ್ರಸಿದ್ಧ ವೃತ್ತಿ ಕಲಾವಿದ ಮಲ್ಪೆ ವಾಸುದೇವ ಸಾಮಗರು ಒದಗಿಸಿದ ಕಥೆಯ ಹಂದರದಿಂದ ರಚಿಸಿದ 'ಪುತ್ರ ಬಲಿದಾನ' ಹಾಗೂ 'ಭಾನುತೇಜಸ್ವಿ' ಪ್ರಸಂಗಗಳು ವರ್ಷದ ತಿರುಗಾಟದಲ್ಲಿ ಯಶಸ್ವಿಯೆನಿಸಿವೆ. ಕೌಂತೇಯ ಕರ್ಣ, ಸೀತಾರಾಮ ಪರಂಧಾಮಗಳಂಥ ಪ್ರಸಂಗಗಳು ತಾಳಮದ್ದಳೆಯ ರೂಪದಲ್ಲಿ ಪ್ರಯುಕ್ತವಾಗಿವೆ. ಆಂಜನೇಯ ಪರಾಜಯವು ಬಯಲಾಟವಾಗಿ ಪ್ರದರ್ಶಿತವಾಗಿವೆ. ತ್ರಿಜನ್ಮ ಕಂಸ ಕೈವಲ್ಯ, ಇಟಗಿ ಕ್ಷೇತ್ರ ಮಹಾತ್ಮೆಗಳು ಒಂದೆರಡು ಪ್ರದರ್ಶನಗಳನ್ನು ಕಂಡಿವೆ.

ಬೆಳಸಲಿಗೆಯವರ ಪ್ರಸಂಗಗಳು ರಂಗದಲ್ಲಿ ಪ್ರದರ್ಶನಗೊಳ್ಳದಿರುವುದಕ್ಕೆ ಅವು ಹಸ್ತಪ್ರತಿಯ ರೂಪದಲ್ಲಿರುವುದು ಒಂದು ಕಾರಣ. ಅವರಿಗೆ ಯಾವುದೇ ಸಂಘಟನೆಯೊಂದಿಗೆ ಸಂಪರ್ಕವಿರಲಿಲ್ಲ. ಸಂಘಟನೆಯ ಸಲುವಾಗಿ ಪ್ರಸಂಗವನ್ನು ಅವರು ರಚಿಸಲೂ ಇಲ್ಲ. ಹಾಗಾಗಿ ಅವು ಮುಂದೆ ಪ್ರದರ್ಶನಗೊಳ್ಳಬೇಕಾಗಿದೆ.

Scanned by CamScanner

ಸುದೀರ್ಘ ಕಾಲದ ರಂಗಾನುಭವದ ಹಿನ್ನೆಲೆಯಿಂದ ರಚಿತಗೊಂಡ ಅವರ ಪ್ರಸಂಗಗಳಲ್ಲಿ ರಂಗಯೋಗ್ಯತೆ ಧಾರಾಳವಾಗಿದೆ. ಅವು ಸೂಕ್ತ ಕಲಾವಿದರಿಗಾಗಿ ಕಾಯ್ದುಕೊಂಡಿವೆ.

ಪ್ರಸಂಗರಚನೆಯಲ್ಲಿ ಬೆಳಸಲಿಗೆಯವರು ಪ್ರಾಚೀನರನ್ನೇ ಮಾದರಿಯನ್ನಾಗಿಟ್ಟುಕೊಂಡವರು. ಮುದ್ದಣನ ಗಾಢವಾದ ಪ್ರಭಾವ ಅವರ ಮೇಲಿದೆ. ಪ್ರಾಸಪ್ರಿಯತೆ ಎದ್ದು ಕಾಣುವಂತದು. ಪ್ರಯಾಸಪಟ್ಟರೂ ಪ್ರಾಸಕ್ಕೆ ಲೋಪ ಬರಬಾರದೆಂಬುದು ಅವರ ಹಟ. ಇದು ಅವರ ಪದ್ಯಗಳಿಗೆ ಲಾಲಿತ್ಯ-ಮಾಧುರ್ಯಗಳನ್ನು ತರಲು ನೆರವಾಗಿದೆ. ಒಂದೊಂದು ಪದ್ಯವೂ ನಾದಮಾಧುರ್ಯದಿಂದ ನಮ್ಮನ್ನು ಸೆಳೆಯುತ್ತದೆ. ಈ ಪ್ರಾಸಪ್ರಿಯತೆಯು ಅವರ ದೌರ್ಬಲ್ಯವೂ ಹೌದು. ಅದನ್ನು ನಿಯಂತ್ರಿಸಿದ್ದರೆ ಇನ್ನೂ ಅರ್ಥಗರ್ಭಿತವಾದ ಪದ್ಯಗಳನ್ನು ರಚಿಸಬಹುದಿತ್ತು. ಪದ್ಯಗಳ ಸಂಖ್ಯೆಯನ್ನು ಕಡಿಮೆಗೊಳಿಸಬಹುದಿತ್ತು. ಭಾಮಿನೀ, ವಾರ್ಧಿಕ್ಯ, ಕಂದಗಳಂಥ ವಿಶಾಲದ ಪದ್ಯಗಳನ್ನು ಕಡಿಮೆಗೊಳಿಸಬಹುದಿತ್ತು ಎನಿಸುತ್ತದೆ.

ಹಾಗಿದ್ದರೂ ಅವರ ಕವಿತ್ವಶಕ್ತಿ ಉನ್ನತಮಟ್ಟದ್ದು. ಆಧುನಿಕ ಅರ್ಥದಲ್ಲಿ ವಿದ್ಯಾವಂತರಲ್ಲದ ಬೆಳಸಲಿಗೆಯವರು ರಚಿಸಿದ್ದಾರೆಂಬುದನ್ನು ನೆನೆದರೆ ಅದೊಂದು ಅದ್ಭುತವನಿಸೀತು. ಅವರ ಎಲ್ಲ ಪ್ರಸಂಗಗಳೂ ಸಮಾನವಾಗಿ ಶ್ರೇಷ್ಠವಾದವುಗಳೆಂದು ಹೇಳಲಾರೆವಾದರೂ ಅನೇಕ ಪ್ರಸಂಗಗಳು ಸಾರ್ವಕಾಲಿಕ ಶ್ರೇಷ್ಠತೆಯ ಪಟ್ಟಿಗೆ ಸೇರಲರ್ಹವಾದವುಗಳೆಂಬುದು ಸ್ಪಷ್ಟ. ಅಂತೆಯೇ ಈ ಕೃತಿಗಳೆಲ್ಲವೂ ಪ್ರಕಟಗೊಂಡು ಯಕ್ಷಗಾನಪ್ರಿಯರ ಕೈಸೇರುವುದು ಅವಶ್ಯವಾಗಿದೆ.

ಯಕ್ಷಗಾನರಂಗಕ್ಕೆ ಅವರಿಂದ ಸಂದ ಸೇವೆ, ಆ ರಂಗಕ್ಕಾಗಿ ಅವರು ಮಾಡಿದ ತ್ಯಾಗಗಳನ್ನು ನೆನೆದರೆ ಅವರಿಗೆ ಪ್ರತಿಫಲ ದೊರೆತಿದ್ದು ಅತ್ಯಲ್ಪ. ಅಲ್ಲಲ್ಲಿ ಕೆಲವು ಸನ್ಮಾನಗಳು ನಡೆದಿವೆ. ಕರ್ನಾಟಕ ಸರಕಾರ ೨೫೦ ರೂಪಾಯಿಗಳ ಮಾಸಾಶನವನ್ನು ದಯಪಾಲಿಸಿತು. ತಾನು ಬದುಕಿರುವಾಗಲೇ ಪ್ರಸಂಗಗಳು ಅಚ್ಚಾದುದನ್ನು ಕಾಣುವ ಆಸೆ ಅವರಿಗಿತ್ತು. ಅದು ಈಡೇರಲಿಲ್ಲ. ಅವರು ದಿವಂಗತರಾದ ಮೇಲೆಯಾದರೂ ಅವರ ಕೃತಿಗಳು ಪ್ರಕಟವಾಗುತ್ತಿರುವುದು ಸುದೈವ. ಅದರಿಂದ ಆ ಹಿರಿಯ ಚೇತನಕ್ಕೆ ಶಾಂತಿ ದೊರಕಲೆಂಬುದು ನಮ್ಮ ಹಾರೈಕೆ.

★

: ಪ್ರಾಯೋಜಕರು :

ದಿ ತೋಟಗಾರ್ಸ ಕೋ-ಒಪ್.
ಸೇಲ್ ಸೊಸ್ಯಾಟಿ ಲಿ.,

ಶಿರಸಿ (ಉ. ಕ.)

- ಬೆಳಸಲಿಗೆಯವರ ಕೃತಿಗಳು -

೧.	ಸಮಗ್ರ ಭಾರತ	೧೯೫೨
೨.	ಸಂಪೂರ್ಣ ರಾಮಾಯಣ	೧೯೫೩
೩.	ಕೌಂತೇಯ ಕರ್ಣ	೧೯೫೭
೪.	ಆಂಜನೇಯ ಪರಾಜಯ	೧೯೫೮
೫.	ವಸಂತಸೇನಾ	೧೯೫೯
೬.	ಕಲಿಗರ್ವಭಂಗ	೧೯೭೮
೭.	ಶ್ರೀಮತಿ ಪರಿಗ್ರಹ	೧೯೭೯
೮.	ಪಾರ್ವತಿ ಆಗ್ರಹ	೧೯೭೯
೯.	ಪುತ್ರ ಬಲಿದಾನ	೧೯೭೯
೧೦.	ತ್ರಿಭುವನ ವಿಜಯ	೧೯೮೨
೧೧.	ತ್ರಿಜನ್ಮ ಕಂಸಕೈವಲ್ಯ	೧೯೮೨
೧೨.	ಸತೀಸಾಮರ್ಥ್ಯ	೧೯೮೨
೧೩.	ಅಹಲ್ಯೋದ್ಧಾರ	೧೯೮೩
೧೪.	ಇಟಗಿ ಕ್ಷೇತ್ರ ಮಹಾತ್ಮೆ	೧೯೮೪
೧೫.	ಮಾಯಾ ಮಂದಾರವತಿ	೧೯೮೪
೧೬.	ಗಂಗಾವತರಣ	೧೯೮೪
೧೭.	ಚ್ಯವನ - ಸುಕನ್ಯಾ	೧೯೮೪
೧೮.	ಓಘವತೀ ಪರಿಣಯ	೧೯೮೫
೧೯.	ವಿಕ್ರಮಾದಿತ್ಯ ವಿಜಯ	೧೯೮೫
೨೦.	ಸೀತಾರಾಮ ಪರಂಧಾಮ	೧೯೮೬
೨೧.	ದುಷ್ಯಂತ ಶಕುಂತಲಾ	೧೯೮೬
೨೨.	ಮಹಾಸತಿ ಮಂಡೋದರಿ	೧೯೮೬
೨೩.	ಭಾನುತೇಜಸ್ವಿ	೧೯೮೭
೨೪.	ಕನ್ನಡ ಕೇಸರಿ	೧೯೮೮
೨೫.	ಕನ್ಯಾರತ್ನ	೧೯೮೮
೨೬.	ಸೌಭಾಗ್ಯ ಪ್ರದಾನ	೧೯೮೯

ಯಕ್ಷಗಾನ

ಅಹಲ್ಯೋದ್ಧಾರ

: ಪಾತ್ರ ವಿವರ :

ದೇವೇಂದ್ರ	ಶಚೀದೇವಿ
ಬೃಹಸ್ಪತಿ	ಚಿತ್ರಸೇನ
ನಾರದ	ಬ್ರಹ್ಮ
ಸರಸ್ವತಿ	ಅಹಲ್ಯಾ
ಗೌತಮ	ಅಗಸ್ತ್ಯ
ತಾಟಕಿ	ಮಾರೀಚ
ಸುಬಾಹು	ದಶರಥ
ಶ್ರೀರಾಮ	ಲಕ್ಷ್ಮಣ
ವಸಿಷ್ಠ	ವಿಶ್ವಾಮಿತ್ರ
ಸುಮಂತ್ರ	

ಚಾರಕರು, ಬ್ರಾಹ್ಮಣರು, ಅಪ್ಸರೆಯರು ಇತ್ಯಾದಿ.

Scanned by CamScanner

ಕಥಾಸಾರ

ಸುರಪುರದಲ್ಲಿ ದೇವೇಂದ್ರನು ಓಲಗಗೊಟ್ಟಿರುವಾಗ ನಾರದನು ಬಂದು ಬ್ರಹ್ಮನ ಮಾನಸ ಸೃಷ್ಟಿಯಾದ ಅಹಲ್ಯೆಯ ಬಗ್ಗೆ ವರ್ಣಿಸುತ್ತಾನೆ. ಅದನ್ನು ಕೇಳಿದ ಇಂದ್ರನು ಅಹಲ್ಯೆಗೆ ತಾನೇ ಯೋಗ್ಯವರನೆಂದು ತಿಳಿಯುತ್ತಾನೆ. ನಾರದನು ದುಡುಕಬೇಡವೆಂದು ಎಚ್ಚರಿಸಿ ಸಾಗುತ್ತಾನೆ.

ಸತ್ಯಲೋಕದಲ್ಲಿ ಬ್ರಹ್ಮನು ಸರಸ್ವತಿಯೊಡನೆ ಅಹಲ್ಯೆಯ ಮದುವೆಯ ಕುರಿತು ಯೋಚಿಸುತ್ತಿರುತ್ತಾನೆ. ಅಷ್ಟು ಹೊತ್ತಿಗೆ ಇಂದ್ರನು ಅಲ್ಲಿಗೆ ಬಂದು ಅಹಲ್ಯೆಯನ್ನು ತನಗೆ ಕೊಡಬೇಕೆಂದು ಪ್ರಾರ್ಥಿಸುತ್ತಾನೆ. ಗೌತಮ ಋಷಿಯು ತನಗೆ ಅಹಲ್ಯೆಯನ್ನು ಕರುಣಿಸಬೇಕೆನ್ನುತ್ತಾನೆ. ಅವರಿಬ್ಬರಲ್ಲಿ ವಾದ-ವಿವಾದ ನಡೆಯುತ್ತದೆ. ಬ್ರಹ್ಮನು ವಿವಾದದ ಮಧ್ಯೆ ಪ್ರವೇಶಿಸಿ 'ಯಾರು ಮೊದಲು ಭೂಪ್ರದಕ್ಷಿಣೆ ಮಾಡುವರೋ ಅವರಿಗೆ ಅಹಲ್ಯೆಯನ್ನು ಕೊಡುತ್ತೇನೆ' ಎನ್ನುತ್ತಾನೆ. ಇಂದ್ರನು ಕೂಡಲೇ ಭೂಪ್ರದಕ್ಷಿಣೆಗೆ ಹೊರಡುತ್ತಾನೆ. ಗೌತಮನು ಬ್ರಹ್ಮನಿಗೆ ಪ್ರದಕ್ಷಿಣೆ ಮಾಡಿ ಅಲ್ಲಿಯೇ ನಿಂತಿರುತ್ತಾನೆ. ಇಂದ್ರನು ತಿರುಗಿ ಬಂದು ಗೆಲುವಿನ ಹಮ್ಮಿನಲ್ಲಿರಲು ಬ್ರಹ್ಮನು 'ಗೌತಮನೇ ಗೆದ್ದಿದ್ದಾನೆ' ಎಂದು ಘೋಷಿಸುತ್ತಾನೆ. ಅಹಲ್ಯೆ ಗೌತಮನ ಮಡದಿಯಾಗುತ್ತಾಳೆ. ಇಂದ್ರನು ಕೋಪಗೊಳ್ಳಲು ಗುರು ಅವನಿಗೆ ಗೌತಮನು ಗೆದ್ದ ಪರಿಯನ್ನು ವಿವರಿಸಿ ಸಮಾಧಾನ ಮಾಡುತ್ತಾನೆ.

ಸುಕೇತನೆಂಬ ಯಕ್ಷನ ಮಗಳು ತಾಟಕಿ ಅತ್ಯಧಿಕ ರೂಪವತಿ. ಗಂಡನನ್ನು ಕಳೆದುಕೊಂಡ ಮೇಲೆ ಕಾಮೋನ್ಮತ್ತಳಾಗಿ ಭೂಮಿಗಿಳಿಯುತ್ತಾಳೆ. ಅಗಸ್ತ್ಯಮುನಿಯನ್ನು ಕಂಡು ಮೋಹಗೊಂಡು ಒಲಿಸಿಕೊಳ್ಳಲೆತ್ನಿಸುತ್ತಾಳೆ. ಅವರು ತಿರಸ್ಕರಿಸಿದಾಗ ಬಲಾತ್ಕಾರಕ್ಕೂ ಎಳಸುತ್ತಾಳೆ. ಮುನಿಯು ಅವಳನ್ನು ಎಡಗಾಲಿನಿಂದ ಒದೆಯಲು ಕೂಗಿಕೊಂಡಾಗ ಅವಳ ಇಬ್ಬರು ಮಕ್ಕಳೂ ಮುನಿಯ ಮೇಲೆ ದಾಳಿಯಿಡಲು ಅಗಸ್ತ್ಯರು ರಕ್ಕಸರಾಗಿರೆಂದು ಶಾಪ ಕೊಡುತ್ತಾರೆ.

ಇಂದ್ರನು ಅಹಲ್ಯೆಯನ್ನೇ ಕನವರಿಸುತ್ತಿರುತ್ತಾನೆ. ಸಮಯ ಕಾಯುತ್ತಿರುತ್ತಾನೆ. ಒಂದು ರಾತ್ರಿ ಕೋಳಿಯಂತೆ ಕೂಗುತ್ತಾನೆ. ಗೌತಮನು ಬೆಳಗಾಯಿತೆಂದು ಸಂಧ್ಯಾವಿಧಿಗೆ ತೆರಳಲು ಗೌತಮ ವೇಷದಿಂದ ಇಂದ್ರ ಬಂದು ಕುಟೀರವನ್ನು ಪ್ರವೇಶಿಸಿ

ನಿಜವನ್ನು ತೋರುತ್ತಾನೆ. ಅಹಲ್ಯೆ ಮೊದಲಿಗೆ ಅವನನ್ನು ತಿರಸ್ಕರಿಸಿದರೂ ಅವನ ಅಪ್ಪುಗೆಗೆ ಕರಗಿ ಜಾರುತ್ತಾಳೆ. ಅಷ್ಟು ಹೊತ್ತಿಗೆ ತಿರುಗಿ ಬಂದ ಗೌತಮನು ಕೋಪದಿಂದ ಶಾಪ ಕೊಡುತ್ತಾನೆ. ಶಾಪದ ಪ್ರಭಾವದಿಂದ ಇಂದ್ರನು ಸಹಸ್ರಯೋನಿಯಾಗುತ್ತಾನೆ. ಅಹಲ್ಯೆ ಶಿಲೆಯಾಗುತ್ತಾಳೆ. ರಾಮನ ಪಾದಸ್ಪರ್ಶದಿಂದ ಮುನ್ನಿನ ರೂಪ ಪಡೆಯುವೆಯೆಂದು ಉಶ್ಶಾಪವನ್ನು ಕೊಟ್ಟು ಗೌತಮ ತೆರಳುತ್ತಾನೆ. ಇಂದ್ರನು ಕಾಲಿಗೆ ಬಿದ್ದರೂ ಅವನನ್ನು ಗೌತಮ ಕ್ಷಮಿಸುವುದಿಲ್ಲ. ನಾರದನು ಹೋಗಿ ಈ ಸಂಗತಿಯನ್ನು ಶಚಿಗೆ ನಿವೇದಿಸುತ್ತಾನೆ. ಶಚಿಯು ಗುರುವಿನೊಂದಿಗೆ ಬಂದು ಅಹಲ್ಯೆಯ ಸ್ಥಿತಿಯನ್ನು ಕಂಡು ಮರುಗಿ, ತನ್ನ ಪತಿಯನ್ನು ಕ್ಷಮಿಸಬೇಕೆಂದು ಗೌತಮನಲ್ಲಿ ಮೊರೆಯಿಡುತ್ತಾಳೆ. ಗುರುವೂ ಮುನಿಯನ್ನು ಯಾಚಿಸುತ್ತಾನೆ. 'ಇಂದ್ರನ ಯೋನಿಗಳು ಕಣ್ಣಾಗಲಿ; ಅನ್ಯರು ಕಾಣದಾಗಲಿ; ಪುರುಷತ್ವವು ಮರಳಿ ಬರುವಂತಾಗಲಿ' ಎಂದು ಪರಿಹಾರ ಸೂಚಿಸಿದ ಗುರುವಿನ ಮಾತಿಗೆ ಗೌತಮನು ಅಸ್ತೆಂದು ಅನುಗ್ರಹಿಸುತ್ತಾನೆ. ತಪಸ್ಸಿಗೆ ತೊಡಗುತ್ತಾನೆ.

ಅಯೋಧ್ಯೆಯಲ್ಲಿ ದಶರಥ ಮಹಾರಾಜನು ಓಲಗಗೊಟ್ಟಿರಲು ವಿಶ್ವಾಮಿತ್ರ ಬಂದು ರಾಕ್ಷಸರ ಉಪಟಳವನ್ನು ನಿವೇದಿಸುತ್ತಾನೆ. ದಶರಥನು ತಾನು ಸೇನಾಸಮೇತನಾಗಿ ಹೊರಡಲು ಸಿದ್ಧನಾಗುತ್ತಾನೆ. ಆದರೆ ವಿಶ್ವಾಮಿತ್ರ ಸಮ್ಮತಿಸುವುದಿಲ್ಲ. ರಾಮಲಕ್ಷ್ಮಣರನ್ನು ಕಳುಹಿಸುವಂತೆ ಕೇಳುತ್ತಾನೆ. ದಶರಥನು ಮಕ್ಕಳನ್ನು ಕಳುಹಿಸಿಕೊಡಲು ಅನುಮಾನಿಸುತ್ತಿರುವಾಗ ವಸಿಷ್ಠಮುನಿಯು ಬುದ್ಧಿಹೇಳಿ ವಿಶ್ವಾಮಿತ್ರನೊಂದಿಗೆ ಮಕ್ಕಳನ್ನು ಕಳುಹಿಸಿಕೊಡಲು ಹೇಳುತ್ತಾನೆ. ದಶರಥನು ಹಾಗೇ ಮಾಡುತ್ತಾನೆ.

ರಾಮಲಕ್ಷ್ಮಣರನ್ನು ಕರೆದುಕೊಂಡು ವಿಶ್ವಾಮಿತ್ರನು ಕಲುಷವನವನ್ನು ಪ್ರವೇಶಿಸಿದಾಗ ತಾಟಕಿಯು ಎದುರಾಗುತ್ತಾಳೆ. ವಿಶ್ವಾಮಿತ್ರನ ಆದೇಶದಂತೆ ರಾಮನು ತಾಟಕಿಯನ್ನು ಸಂಹರಿಸುತ್ತಾನೆ. ಮುಂದೆ ವಿಶ್ವಾಮಿತ್ರನ ಆಶ್ರಮದಲ್ಲಿ ಯಜ್ಞರಕ್ಷಣೆಯಲ್ಲಿ ತೊಡಗಿರಲು ರಾಕ್ಷಸರ ಆಗಮನವಾಗುತ್ತದೆ. ಸುಬಾಹುವನ್ನು ಸಂಹರಿಸುತ್ತಾನೆ. ಅದನ್ನು ಕಂಡ ಮಾರೀಚನು ದಾಳಿಯಿಡಲು ರಾಮನ ಬಾಣವು ಅವನನ್ನು ಸಾಗರಕ್ಕೆ ಎಸೆಯುತ್ತದೆ. ಯಜ್ಞಕ್ಕಿದ್ದ ಕಂಟಕ ದೂರವಾಗುತ್ತದೆ.

ವಿಶ್ವಾಮಿತ್ರನ ಆಶ್ರಮಕ್ಕೆ ಸೀತಾಸ್ವಯಂವರದ ಸುದ್ದಿ ಬರುತ್ತದೆ. ವಿಶ್ವಾಮಿತ್ರ ರಾಮಲಕ್ಷ್ಮಣರನ್ನು ಕರೆದುಕೊಂಡು ಮಿಥಿಲೆಗೆ ಹೊರಡುತ್ತಾನೆ. ಹಾಗೆ ಹೋಗುವಾಗ

Scanned by CamScanner

ಕಥಾಸಾರ

ಸುರಪುರದಲ್ಲಿ ದೇವೇಂದ್ರನು ಓಲಗಗೊಟ್ಟಿರುವಾಗ ನಾರದನು ಬಂದು ಬ್ರಹ್ಮನ ಮಾನಸ ಸೃಷ್ಟಿಯಾದ ಅಹಲ್ಯೆಯ ಬಗ್ಗೆ ವರ್ಣಿಸುತ್ತಾನೆ. ಅದನ್ನು ಕೇಳಿದ ಇಂದ್ರನು ಅಹಲ್ಯೆಗೆ ತಾನೇ ಯೋಗ್ಯವರನೆಂದು ತಿಳಿಯುತ್ತಾನೆ. ನಾರದನು ದುಡುಕಬೇಡವೆಂದು ಎಚ್ಚರಿಸಿ ಸಾಗುತ್ತಾನೆ.

ಸತ್ಯಲೋಕದಲ್ಲಿ ಬ್ರಹ್ಮನು ಸರಸ್ವತಿಯೊಡನೆ ಅಹಲ್ಯೆಯ ಮದುವೆಯ ಕುರಿತು ಯೋಚಿಸುತ್ತಿರುತ್ತಾನೆ. ಅಷ್ಟು ಹೊತ್ತಿಗೆ ಇಂದ್ರನು ಅಲ್ಲಿಗೆ ಬಂದು ಅಹಲ್ಯೆಯನ್ನು ತನಗೆ ಕೊಡಬೇಕೆಂದು ಪ್ರಾರ್ಥಿಸುತ್ತಾನೆ. ಗೌತಮ ಋಷಿಯು ತನಗೆ ಅಹಲ್ಯೆಯನ್ನು ಕರುಣಿಸಬೇಕೆನ್ನುತ್ತಾನೆ. ಅವರಿಬ್ಬರಲ್ಲಿ ವಾದ-ವಿವಾದ ನಡೆಯುತ್ತದೆ. ಬ್ರಹ್ಮನು ವಿವಾದದ ಮಧ್ಯೆ ಪ್ರವೇಶಿಸಿ 'ಯಾರು ಮೊದಲು ಭೂಪ್ರದಕ್ಷಿಣೆ ಮಾಡುವರೋ ಅವರಿಗೆ ಅಹಲ್ಯೆಯನ್ನು ಕೊಡುತ್ತೇನೆ' ಎನ್ನುತ್ತಾನೆ. ಇಂದ್ರನು ಕೂಡಲೇ ಭೂಪ್ರದಕ್ಷಿಣೆಗೆ ಹೊರಡುತ್ತಾನೆ. ಗೌತಮನು ಬ್ರಹ್ಮನಿಗೆ ಪ್ರದಕ್ಷಿಣೆ ಮಾಡಿ ಅಲ್ಲಿಯೇ ನಿಂತಿರುತ್ತಾನೆ. ಇಂದ್ರನು ತಿರುಗಿ ಬಂದು ಗೆಲುವಿನ ಹಮ್ಮಿನಲ್ಲಿರಲು ಬ್ರಹ್ಮನು 'ಗೌತಮನೇ ಗೆದ್ದಿದ್ದಾನೆ' ಎಂದು ಘೋಷಿಸುತ್ತಾನೆ. ಅಹಲ್ಯೆ ಗೌತಮನ ಮಡದಿಯಾಗುತ್ತಾಳೆ. ಇಂದ್ರನು ಕೋಪಗೊಳ್ಳಲು ಗುರು ಅವನಿಗೆ ಗೌತಮನು ಗೆದ್ದ ಪರಿಯನ್ನು ವಿವರಿಸಿ ಸಮಾಧಾನ ಮಾಡುತ್ತಾನೆ.

ಸುಕೇತನೆಂಬ ಯಕ್ಷನ ಮಗಳು ತಾಟಕಿ ಅತ್ಯಧಿಕ ರೂಪವತಿ. ಗಂಡನನ್ನು ಕಳೆದುಕೊಂಡ ಮೇಲೆ ಕಾಮೋನ್ಮತ್ತಳಾಗಿ ಭೂಮಿಗಿಳಿಯುತ್ತಾಳೆ. ಅಗಸ್ತ್ಯಮುನಿಯನ್ನು ಕಂಡು ಮೋಹಗೊಂಡು ಒಲಿಸಿಕೊಳ್ಳಲೆತ್ನಿಸುತ್ತಾಳೆ. ಅವರು ತಿರಸ್ಕರಿಸಿದಾಗ ಬಲಾತ್ಕಾರಕ್ಕೂ ಎಳಸುತ್ತಾಳೆ. ಮುನಿಯು ಅವಳನ್ನು ಎಡಗಾಲಿನಿಂದ ಒದೆಯಲು ಕೂಗಿಕೊಂಡಾಗ ಅವಳ ಇಬ್ಬರು ಮಕ್ಕಳೂ ಮುನಿಯ ಮೇಲೆ ದಾಳಿಯಿಡಲು ಅಗಸ್ತ್ಯರು ರಕ್ಕಸರಾಗಿರೆಂದು ಶಾಪ ಕೊಡುತ್ತಾರೆ.

ಇಂದ್ರನು ಅಹಲ್ಯೆಯನ್ನೇ ಕನವರಿಸುತ್ತಿರುತ್ತಾನೆ. ಸಮಯ ಕಾಯುತ್ತಿರುತ್ತಾನೆ. ಒಂದು ರಾತ್ರಿ ಕೋಳಿಯಂತೆ ಕೂಗುತ್ತಾನೆ. ಗೌತಮನು ಬೆಳಗಾಯಿತೆಂದು ಸಂಧ್ಯಾವಿಧಿಗೆ ತೆರಳಲು ಗೌತಮ ವೇಷದಿಂದ ಇಂದ್ರ ಬಂದು ಕುಟೀರವನ್ನು ಪ್ರವೇಶಿಸಿ

ನಿಜವನ್ನು ತೋರುತ್ತಾನೆ. ಅಹಲ್ಯೆ ಮೊದಲಿಗೆ ಅವನನ್ನು ತಿರಸ್ಕರಿಸಿದರೂ ಅವನ ಅಪ್ಪುಗೆಗೆ ಕರಗಿ ಜಾರುತ್ತಾಳೆ. ಅಷ್ಟು ಹೊತ್ತಿಗೆ ತಿರುಗಿ ಬಂದ ಗೌತಮನು ಕೋಪದಿಂದ ಶಾಪ ಕೊಡುತ್ತಾನೆ. ಶಾಪದ ಪ್ರಭಾವದಿಂದ ಇಂದ್ರನು ಸಹಸ್ರಯೋನಿಯಾಗುತ್ತಾನೆ. ಅಹಲ್ಯೆ ಶಿಲೆಯಾಗುತ್ತಾಳೆ. ರಾಮನ ಪಾದಸ್ಪರ್ಶದಿಂದ ಮುನ್ನಿನ ರೂಪ ಪಡೆಯುವೆಯೆಂದು ಉಶ್ಶಾಪವನ್ನು ಕೊಟ್ಟು ಗೌತಮ ತೆರಳುತ್ತಾನೆ. ಇಂದ್ರನು ಕಾಲಿಗೆ ಬಿದ್ದರೂ ಅವನನ್ನು ಗೌತಮ ಕ್ಷಮಿಸುವುದಿಲ್ಲ. ನಾರದನು ಹೋಗಿ ಈ ಸಂಗತಿಯನ್ನು ಶಚಿಗೆ ನಿವೇದಿಸುತ್ತಾನೆ. ಶಚಿಯು ಗುರುವಿನೊಂದಿಗೆ ಬಂದು ಅಹಲ್ಯೆಯ ಸ್ಥಿತಿಯನ್ನು ಕಂಡು ಮರುಗಿ, ತನ್ನ ಪತಿಯನ್ನು ಕ್ಷಮಿಸಬೇಕೆಂದು ಗೌತಮನಲ್ಲಿ ಮೊರೆಯಿಡುತ್ತಾಳೆ. ಗುರುವೂ ಮುನಿಯನ್ನು ಯಾಚಿಸುತ್ತಾನೆ. 'ಇಂದ್ರನ ಯೋನಿಗಳು ಕಣ್ಣಾಗಲಿ; ಅನ್ಯರು ಕಾಣದಾಗಲಿ; ಪುರುಷತ್ವವು ಮರಳಿ ಬರುವಂತಾಗಲಿ' ಎಂದು ಪರಿಹಾರ ಸೂಚಿಸಿದ ಗುರುವಿನ ಮಾತಿಗೆ ಗೌತಮನು ಅಸ್ತೆಂದು ಅನುಗ್ರಹಿಸುತ್ತಾನೆ. ತಪಸ್ಸಿಗೆ ತೊಡಗುತ್ತಾನೆ.

ಅಯೋಧ್ಯೆಯಲ್ಲಿ ದಶರಥ ಮಹಾರಾಜನು ಓಲಗಗೊಟ್ಟಿರಲು ವಿಶ್ವಾಮಿತ್ರ ಬಂದು ರಾಕ್ಷಸರ ಉಪಟಳವನ್ನು ನಿವೇದಿಸುತ್ತಾನೆ. ದಶರಥನು ತಾನು ಸೇನಾಸಮೇತನಾಗಿ ಹೊರಡಲು ಸಿದ್ಧನಾಗುತ್ತಾನೆ. ಆದರೆ ವಿಶ್ವಾಮಿತ್ರ ಸಮ್ಮತಿಸುವುದಿಲ್ಲ. ರಾಮಲಕ್ಷ್ಮಣರನ್ನು ಕಳುಹಿಸುವಂತೆ ಕೇಳುತ್ತಾನೆ. ದಶರಥನು ಮಕ್ಕಳನ್ನು ಕಳುಹಿಸಿಕೊಡಲು ಅನುಮಾನಿಸುತ್ತಿರುವಾಗ ವಸಿಷ್ಠಮುನಿಯು ಬುದ್ಧಿಹೇಳಿ ವಿಶ್ವಾಮಿತ್ರನೊಂದಿಗೆ ಮಕ್ಕಳನ್ನು ಕಳುಹಿಸಿಕೊಡಲು ಹೇಳುತ್ತಾನೆ. ದಶರಥನು ಹಾಗೇ ಮಾಡುತ್ತಾನೆ.

ರಾಮಲಕ್ಷ್ಮಣರನ್ನು ಕರೆದುಕೊಂಡು ವಿಶ್ವಾಮಿತ್ರನು ಕಲುಷವನವನ್ನು ಪ್ರವೇಶಿಸಿದಾಗ ತಾಟಕಿಯು ಎದುರಾಗುತ್ತಾಳೆ. ವಿಶ್ವಾಮಿತ್ರನ ಆದೇಶದಂತೆ ರಾಮನು ತಾಟಕಿಯನ್ನು ಸಂಹರಿಸುತ್ತಾನೆ. ಮುಂದೆ ವಿಶ್ವಾಮಿತ್ರನ ಆಶ್ರಮದಲ್ಲಿ ಯಜ್ಞರಕ್ಷಣೆಯಲ್ಲಿ ತೊಡಗಿರಲು ರಾಕ್ಷಸರ ಆಗಮನವಾಗುತ್ತದೆ. ಸುಬಾಹುವನ್ನು ಸಂಹರಿಸುತ್ತಾನೆ. ಅದನ್ನು ಕಂಡ ಮಾರೀಚನು ದಾಳಿಯಿಡಲು ರಾಮನ ಬಾಣವು ಅವನನ್ನು ಸಾಗರಕ್ಕೆ ಎಸೆಯುತ್ತದೆ. ಯಜ್ಞಕ್ಕಿದ್ದ ಕಂಟಕ ದೂರವಾಗುತ್ತದೆ.

ವಿಶ್ವಾಮಿತ್ರನ ಆಶ್ರಮಕ್ಕೆ ಸೀತಾಸ್ವಯಂವರದ ಸುದ್ದಿ ಬರುತ್ತದೆ. ವಿಶ್ವಾಮಿತ್ರ ರಾಮಲಕ್ಷ್ಮಣರನ್ನು ಕರೆದುಕೊಂಡು ಮಿಥಿಲೆಗೆ ಹೊರಡುತ್ತಾನೆ. ಹಾಗೆ ಹೋಗುವಾಗ

Scanned by CamScanner

ದಾರಿಯಲ್ಲಿ ನಿರ್ಮಾನುಷವಾದ ಸ್ತಬ್ಧವಾದ ವನವೊಂದು ಸಿಗುತ್ತದೆ. ಈ ವನದ ಕುರಿತು ರಾಮನು ಕೇಳಿದಾಗ ವಿಶ್ವಾಮಿತ್ರನು ಕಥೆ ಹೇಳತೊಡಗುತ್ತಿರುವಂತೆ ಬಂಡೆಯೊಂದನ್ನೆಡವಿ ಬೀಳುತ್ತಾನೆ. ಅದನ್ನು ಕಂಡ ರಾಮನು ಕೋಪದಿಂದ ಬಂಡೆಯನ್ನು ಕಿತ್ತಿಡುವೆನೆಂದು ಒದೆಯಲು ಬಂಡೆಯು ಮಾಯವಾಗಿ ಅಹಲ್ಯೆ ಪ್ರಕಟಳಾಗುತ್ತಾಳೆ. ರಾಮನನ್ನು ಸ್ತುತಿಸುತ್ತಾಳೆ. ರಾಮನು ಅವಳನ್ನು ಅನುಗ್ರಹಿಸಿ, 'ನಿನ್ನನ್ನು ನೆನೆದವರ ದುರಿತವು ನಾಶವಾಗಲಿ' ಎಂದು ಹರಸುತ್ತಾನೆ. ಅಷ್ಟು ಹೊತ್ತಿಗೆ ಗೌತಮನೂ ಅಲ್ಲಿಗೆ ಬರುತ್ತಾನೆ. ರಾಮನನ್ನು ಕುಟೀರಕ್ಕೆ ಕರೆತಂದು ಪೂಜಿಸುತ್ತಾನೆ.

***

ಅಹಲ್ಯೋದ್ಧಾರ

ನಿವೇದನಂ

ಪ್ರೇಮದ ತನುಜಗೆ ಮಿಗಿಲಪ । ಹೇಮಗರ್ಭಜ್ಞಾಧಾಷ್ಟಯ ಕಾಮಿತದಂತಾಂ ॥
ನೇಮದಿ ಬರೆದೀ ಕೃತಿ ದು । ಶ್ವಾಮವ ತೊಡೆದರೆ ಸಾರ್ಥಕವೀ ಮಹಿಗೆಂದೆಂ ॥ ೧ ॥

ಭಾಮಿನಿ

ಗುರು ಗಣಪ ಸಿರಿಹರಿಯುಮಾಮೃಡ । ಸರಸ್ವತಿಯು ವಿಧಿ ಶಚಿ ಸುರೇಂದ್ರಾ ।
ದ್ಯರಿಗೆರಗಿ ಮುನಿ ನಿಕರ ಪಿತೃಕವಿವರರ ಬರವಂದು ॥ ಧರಣಿಸುರಸಾನೆಕ್ಷ್ಣಾನದಿ ।
ಬರೆವೆಗಣಪತಿ ವಿಠಲ ಸಂಭವ ಇರವು ಉ. ಕ. ಜಿಲ್ಲೆ ಸಿದ್ದಾಪುರದ ಬೆಳಸಲಿಗೆ ॥ ೧ ॥

ರಾಗ : ಸೌರಾಷ್ಟ್ರ ತಾಳ : ತ್ರಿವುಡೆ

ಮೃಡನುಮೆಗೆ ಶ್ರೀರಾಮ ಚರಿತವ । ನುಡಿವುತಿರೆ ತಡೆದೆಂದಳಾಸತಿ । ಮಡದಿ
ಮೌಕ್ತಿಕಮಣಿಯಹಲ್ಯೆಯು । ದಡಿಗ ಸುರಪ ॥ ೧ ॥ ಕೆಡಿಸಿ ಶಾಪವಹಾಂತ
ಪೌಲಮಿ । ನುಡಿಗನುಗ್ರಹಗೈದ ಗೌತಮ । ಮಡದಿ ತಾ ಶಿಲೆಯಾಗಿ ಮುನ್ನಿನ ।
ಒಡಲನೆಂತು ॥ ೨ ॥ ಪಡೆದಳ್ಳೆ ಶ್ರೀರಾಮನಿಂದಲಿ । ಮಡಿದ ತಾಟಕಿ ಯಾರು
ತತ್ತುತ । ರೊಡಲಿರವ ಬಿತ್ತರಿಪುದೆನೆ ಹರ । ನುಡಿದ ಶಿವೆಗೆ ॥ ೩ ॥

ಭಾಮಿನಿ

ಲೋಲೆ ಕೇಳ್ಸುರ ಪುರದೊಳೊಂದಿನ । ಓಲಗದೊಳೆಸೆದಿರ್ದನಿಂದ್ರನು ।
ಓಲಯಿಸುತಿರಲವಿಲ ಸುಮನಸ ಜಾಲ ವಿಭವದಲಿ ॥ ಶ್ರೀಲಲಾಮನ ನುತಿಸಿ
ನಾರದ । ನಾಲಯಕ್ಕೈತಂದ ತ್ರಿಜಗ । ಪಾಲನೆದ್ದಾದರಿಸಿ ಕೂಡ್ರಿಸಿ ಕಾಲಿಗೆರಗುತಲಿ
॥ ೧ ॥

ರಾಗ : ಕಾಂಬೋಧಿ ತಾಳ : ಝಂಪೆ

ನೀವಿಳೆಯ ಹಿತಕಾಗಿ । ಮೈವಲವ ಧಿಕ್ಕರಿಸಿ । ಗೈವುತಿಹರನಿಶವೂ ಪ್ರವಾಸ ॥ ಅವಲ್ಲ
ಬರಿದೆ ದಯ । ಗೈವರಲ್ಲವು ಬರಿದೆ । ಯಾವುದಿಂದಿನ ವಿಶೇಷ ॥ ೧ ॥
ಎಂದಡೆಂದನು ಮುನಿಪ । ತಂದೆ ಮಾನಸಸೃಷ್ಟಿ । ಯಿಂದ ಜನಿಸಿಹಳೋರ್ವ ತಂಗಿ ॥
ಸುಂದರಿಗೆ ಜೋಡಿಲ್ಲ । ಹೊಂದಿಹಳು ಯೌವನವ । ಮುಂದಾರವರಿಪಳೊ

Scanned by CamScanner

ಶುಭಾಂಗಿ ॥೨॥ ಸಿರಿಗೌರಿ ಸರಸತಿಯು । ಅರಸಿಶಚಿ ಮೇಣ್ ರತಿಯು ಸರಿಯಿಲ್ಲ
ವೀಯಯ್ವರಿಂಗೆ ॥ ತರುಣಿ ಮಣಿ ಪೌಲೋಮಿ । ಗೊರೆಯಹಳೆ ಪೆಸರೇನು ।
ಒರೆಯೆಂದನಿಂದ್ರ, ಮುನಿಪಂಗೆ ॥೩॥

ರಾಗ : ಸವ್ವಾ ತಾಳ : ಏಕ

ನಾರದನರಿಯದ । ಧ್ಯಾರೀ ಆಯ್ವರ । ನಾರಿಯಹಲ್ಯೆಯು । ಮೀರಿಪಳು ॥
ಸಾರಸಭವಶ್ಯಂ । ಗಾರ ರಸದಲಿ ಕು । ಮಾರಿಯ ಸೃಜಿಸಿಹ । ಧಾರಿಯೊಳು ॥೧॥
ಮೂವಿಳೆಗುತ್ತಮ । ವಾವುದೆಯಿರ್ದರು । ನಾವೇ ಬಾಧ್ಯರು । ತೀವಿಯಲಿ ॥ ಆ ವಿಧದಲಿ
ಮುನಿದೇವರುಯೆನ್ನಯ । ಭಾವರೆಯಪ್ಪಿರಿ । ವಾವೆಯಲಿ ॥೨॥ ಭಾವಜನಯ್ಯನ ।
ಭಾವವದೇನಂ । ದಾವನರಿವ ತ್ರೈಲೋಕದೊಳು ॥ ಭಾವನೆನಿಪದು । ಭಾರ್ಗವರಿ
ದುಡುಕಲ । ಭಾವಪದವಿಗಪಿ । ವೇಕದೊಳು ॥೩॥

ರಾಗ : ಸೌರಾಷ್ಟ್ರ ತಾಳ : ತ್ರಿವುಡೆ

ಸರಿದನಾರದ ಸತ್ಯಲೋಕದಿ । ಸರಸಿಜಾಸನ ಮನುಮುನಿಗಳೊಡ ।
ವೆರವುತೋಲಗವಿತ್ತು ಸಂತಸ । ಭರಿತನಾಗಿ ॥೧॥ ಕರೆದು ವಾಣಿಯ
ಸುತೆಯಹಲ್ಯೆಗೆ । ಸರಿಯುತಿದೆ ಹದಿಹರಯ ಕಾಲದಿ । ಪರಿಣಯವನೆಸಗದಿರೆ
ಮನಸಿಗೆ । ಕೊರತೆಯೈಸೆ ॥೨॥ ವರನನಾರಿಸು ನೀನು ನಮ್ಮಯ ತರಳೆಗೆನಲೀ
ನುಡಿಯ ಕೇಳುತ । ಕಿರುನಗೆಯೊಳಾ ಬ್ರಾಹ್ಮಿಕಾಂತನ । ಚರಣಕೆರಗಿ ॥೩॥

ರಾಗ : ಸುರುಟಿ ತಾಳ : ಏಕ

ತನುಭವರೆಲ್ಲಿಹರು । ಪ್ರಿಯತವ । ಮನಸಿಜರೆಲ್ಲವರು ॥ ಜನನಿಯೆನಿಪಯ ।
ನ್ನೆಣಿಕೆಯನೆಲ್ಲವ । ಒಣಗಿಸುತೀಪರಿ । ಇನಿಯ ಛೇಡಿಸದಿರು ॥೧॥ ಹೊರುವ
ಹೆರುವ ಕಿಡಕು । ಯೌವನ ಕರಗಿಸುತಿಹಬದುಕು ॥ ಚಿರನೂತನೆ ನೀ ।
ನಿರಬೇಕವನಿಯ । ತರಳರ ತಾಯೆಂದರಿದರೆ ಸಾಕು ॥೨॥ ಸಾಕುವ ಹೊಣೆಯಿಲ್ಲ ।
ಮಕ್ಕಳ । ವ್ಯಾಕುಲಕೆಣೆಯಿಲ್ಲ ॥ ಲೋಕಪಿತಾಮಹ । ಸಾಕೇ ಮೈಸುಖ । ನಾಕುವರರ
ಹೆರ । ಬೇಕೈನಲ್ಲ ॥೩॥

ಭಾಮಿನಿ

ಮಾದಳಾಧರೆ ಬ್ರಾಹ್ಮಿ ಸಾಕೀ । ವಾದವಾವನ್ಯೋನ್ಯರೆಮ್ಮಿಂ । ದಾದುದೀಜಗನಾವೆ
ನಮ್ಮೊಳಗಾದಪುದು ಲಯವು ॥ ಭೇದವಿಲ್ಲವು ಪ್ರಕೃತಿ ಪುರುಷರೊ । ಛಾದಿ
ಯಾರೆಂದಿಲ್ಲವರಿತು ಪಿ । ನೋದವೇಕೆನುತಿರುವ ಸಭೆಗುನ್ಮಾದದಿಂ ಮಘವ ॥೧॥

ರಾಗ : ಮಧುಮಾಧವಿ ತಾಳ : ತ್ರಿವುಡೆ

ಬಂದು ದೂರದಿ ಕಂಡಹಲ್ಯಾ । ಸುಂದರಿಯ ಹೊಂದದಿರೆ ತನಗಿರು ।
ವಂದವೈಸಿರಿಯಿಲ್ಲ ನಿಷ್ಫಲ । ವೆಂದು ಮನದಿ ॥ ಬೇಗುದಿ ॥೧॥ ಹೊಂದಿ
ಮುನ್ನಡೆದಬುಜ ಪೀಠಗೆ । ವಂದಿಸುತ ಶಿರಬಾಗಿ ನಿಂದನು । ಚೆಂದದಿಂ ಮನ್ನಿಸುತ
ಕುಶಲವೆ । ಎಂದಡಜನು ॥ ಧಿಷಣನು ॥೨॥ ಕರವ ಮುಗಿಯುತ ದಯದಿ ನಿನ್ನೀ
ತರಳೆಯನು ಎನಗಿತ್ತು ಪೊರೆಯೆನೆ । ಸರಸಿಜಾಸನನೆರಗಿ ಗೌತಮ । ನೊರೆದನಾಗ
॥೩॥

ರಾಗ : ಕಾಂಬೋಧಿ ತಾಳ : ಝಂಪೆ

ಲೋಕಕರ್ತನೆ ದಯದೊ । ಈ ಕುಮಾರಿಕಯಳನು । ನೀ ಕರುಣಿಸೆನಗೆ
ಸತಿಯಾಗಿ ॥ ನಾಕುವರರಂ ಪಡೆದು । ನೂಕಿ ಪುನ್ನರಕವನು ।
ಸಾಕುತಿಹೆನನಿಶಲೀಸಾಗಿ ॥೧॥ ಲೋಭದಿಂದಿಂದ್ರ, ಹರಿ । ನಾಭಿ ಸಂಭವಗೆಂದ ।
ನೀ ಬಲ್ಲೆಯೈಸೆ ತೇರ್ಗಡೆಯ ॥ ಈ ಛಕಾರಿಗೆ ಕೊಟ್ಟ । ರಾಭೀಷ್ಟ
ಸುತೆಗಹುದೆ । ನಾಭರಿಪೆ ಮೂಲೋಕದೊಡೆಯ ॥೨॥ ಸಿದ್ಧರೆಮ್ಮೆಯರೋಮ ।
ಕಿದ್ದ ಬೆಲೆಯಿವಗಿಹುದೆ । ಇದ್ದೂರಗೈದು ಸ್ವರ್ಗವನು ॥ ಬದ್ದದಮರಾವತಿಯ ।
ದಗ್ಧಿಸುವ ಸಾಮರ್ಥ್ಯ । ಸಿದ್ಧಿಯೆಮಗೆಂದ ಗೌತಮನು ॥೩॥

ರಾಗ : ಭೈರವಿ ತಾಳ : ಅಷ್ಟ

ನೆನೆದಿಷ್ಟಗಳು ಸಂಭವ । ಇರ್ದರು ಮುನಿ । ಮನುಜನೋಡಬುಜಭುವ ॥ ಅ
ನಿಮಿಷಪತಿ ನಾನ । ಗಣಿತ ಸಂಪದದೊಡ । ನನಿಶ ಸೌಖ್ಯವನುಂಬವ ॥೧॥
ದನುಜರೆಂದರೆ ಓಡುವ । ತನುವಗಿರಿ । ವನದಲಿ ಬೈತಿಡುವ ॥ ಘನಹೇಡಿ
ಮತ್ತಪ್ಪೋ । ಧನ ಚಿರಮುನಿ ಸಿರಿ । ಗೆಣೆಯುಂಟೆ ಪೇಳುದೇವ ॥೨॥
ಸುರಪಾಲನರಮನೆಯ । ವೈಭವವೆಲ್ಲಿ । ಧರೆಯೆಲೆ ಭಾವಣೆಯ ॥
ನರಕಯಾತನೆಯೆಲ್ಲಿ । ಅರಸಿಕನಿವಕೊಡು । ಸರಸಿಯನೆನಗೆಜೀಯ ॥೩॥
ಸತಿಯೊರ್ವಳಿವಗಿಹಳು । ಪೌಲಮಿ ರೂಪ । ಪತಿ ಸಾಧ್ವಿಯಾಗಿಹಳು ॥
ಅತಿಕಾಮಿಯಿವ ವೇಶ್ಯಾ । ರತಗಿತ್ತಣುಗೆಗಧೋ । ಗತಿಗೈಯದಿರು ಕೃಪಾಳು ॥೪॥

ಭಾಮಿನಿ

ಕೋಪದಿಂದಿವರಿಂತು ಸೆಣಸಿದ । ಡಾಪಜಾಸನ ತಡೆವುತುಭಯರು ।
ಮಾಪುರುಷರಾರಿಕೆಗೆ ಗೈವುದು ಭೂಪ್ರದಕ್ಷಿಣೆಯ ॥ ಓಪೆಯಾವಳು ಮೊದಲು

Scanned by CamScanner

ಬಂದವ । ಗೀಪದುಮ ಮುಖಿಯೆಂದಡಿಂದ್ರನು । ತಾ ಪಡೆಯದಿರೆನೆಸುತ್ರ ಪುಂಗಜದಾಪೆಗಲನೇರಿ ॥ ೧ ॥

ರಾಗ : ಮಾರವಿ ತಾಳ : ಏಕ

ರೂಢಿಗಿಳಿದ ಗತಿ । ಗಾಢಕೆ ಗಜ ತನು । ವೀಡಾಡುವ ತೆರದಿ ॥ ಓಡಿದ ಮುನಿಪನ । ಗಾಡಿದ ಯುಕ್ತಿಯ । ಮಾಡಿದ ಸುಸ್ಥಿರದಿ ॥ ೧ ॥ ಕ್ಷೀರಮನೆಯೊಳಿರೆ । ನೀರ್ಮಜ್ಜಿಗೆಗೂ । ರೂರನಲೆವ ಮರುಳ ॥ ತೋರುವೆ ಮುನಿಗಳ । ಪಾರಧೀಶಕ್ತಿಯ । ಹೀರಲದರ ತಿರುಳ ॥ ೨ ॥ ಸಾದರದಲಿ ವಿ । ಶ್ವೋದರ ಬೊಮ್ಮನ । ಗೈದು ಪ್ರದಕ್ಷಿಣೆಯ ॥ ಪಾದದೊಳೆರಗುತ । ಮೋದದಿ ಕುಳಿತ ಶ । ಚೀಧವ ಮೇದಿನಿಯ ॥ ೩ ॥

ಕಂದಪದ್ಯ

ಉರುತರ ವೇಗದಿ ಸುತ್ತಿದು । ಹರುಷದಿ ಬರುತ ವಿರಂಚಿಗೆ ಶಿರಬಾಗುತ್ತಂ ॥ ಹೊರಡದ ಗೌತಮನಿರವಂ । ಪರಿಕಿಸಿಗೆಲಿದುಬ್ಬಿನೊಳಂಸುರಪತಿ ನಗುತಂ ॥೧ ॥

ರಾಗ : ನವರೋಜು ತಾಳ : ಏಕ

ಲಲನೆಯ ಪೊಂದುವ ಮುನಿಪ । ತಾ । ಕುಳಿತಲ್ಲೇ ಮಲಗಿರ್ಪ ॥ ಗಳಿಸಲು ಬಯಕೆಯ । ಬಲಬೇಕವನಿಯ । ಬಳಸಿ ಬಂದಿಹೆ ನಾ । ನಲಘು ಪ್ರತಾಪ ॥ ೧ ॥ ಹೆಣ್ಣನು ಗೆದ್ದಿಹೆ ನಾನು । ದಿಟ । ಗಣ್ಯ ಮಾವನು ನೀನು ॥ ಎಣ್ಣುವೆಯೇನ ಹಿ । ರಣ್ಯೋದರ ನಗೆ । ಬಣ್ಣವೆ ಕರೆಸೈ । ಕನ್ನಿಕೆಯಳನು ॥ ೨ ॥

ಭಾಮಿನಿ

ಜಲಜಸಂಭವ ನುಡಿದ ನಗುತಲಿ । ಬಲದೊಡನೆ ಚಾತುರ್ಯವಿಲ್ಲದೆ । ಫಲಿಸದಾವುದು ದಿಟವು ನಿನ್ನಗ್ಗಳಿಕೆಯತಿಯಾಯ್ತು ॥ ನಿಲಿಸಿದರ ವಿಶ್ರಮಿಸು ಕನ್ನಿಕೆ । ಗೆಲಿದವನ ಹೊರತನ್ಯಗಾಗಳು । ತಿಳಿಯೆನುತಲಾಕ್ಷಣವೆ ಕರೆಸಿದ ಚಲುವ ಬಾಲಕಿಯ ॥ ೧ ॥

ರಾಗ : ಮಧುಮಲ್ಹಾರ ತಾಳ : ಆದಿ ತ್ರಿವುಡೆ

ಕರೆಯ ಕೇಳುತಹಲ್ಯೆ । ಭರಿತ ಹರುಷದಿ । ಪೊರಟಳೊಯ್ಯನೆ ನಗೆ । ಯರಳ ವರುಷದಿ ॥ ನೆರೆದರೆಲ್ಲರನದ್ದಿ । ತರಳೆ ವಿಲಸದಿ । ಪರಿಮಳಿಸುವ ಮಯ್ಯ । ಸಿರಿಯಾಕರುಷದಿ ॥ ಪಲ್ಲ ॥ ಸ್ಮರಧನು ಭ್ರೂ । ಸರಸಿಜಾಂಬಕಿ । ಗುರುಪಯೋಧರೆ । ವರನಿತಂಬಿನಿ । । ಕರುಳ ಮೇಣ್ ಮುಂಜೆರಗ ತಿದ್ದುತ । ಬರುತಲಯ್ಯಂ ।ಗೆರೆಗೆ

ಸರಸದಿ ॥ ಕರೆಯ ॥ ಅ. ಪ. ॥

ರಾಗ : ಕೇದಾರಗೌಳ ತಾಳ : ಅಷ್ಟ

ಅಣುಗೆಗಾಶೀರ್ವಾದ । ವನು ಗೈದುಗುಪಿತದಿ । ವನಜಸಂಭವನೆಂದನು ॥ ಜನಜನಿತದಿ ಪಣ । ಹಣೆದಿಹ ಗೌತಮ । ಮುನಿಗೆ ಪೂಮಾಲೆಯನು ॥ ೧ ॥ ತೊಡಿಸೆಂದು ಹಾರವ । ಕೊಡಲು ಕೊಂಡೆರಗುತ । ಬೆಡಗಿ ಮುಂದಡಿಯಿಡುತ ॥ ಬಿಡುಗಣ್ಣಪತಿಯ ಮುಂ । ಗಡೆಯೆ ಮಾಲೆಯ ಮುನಿ । ಮೃಡನಿಗಿಕ್ಕಲು ನೋಡುತ ॥ ೨ ॥ ಹರುಷೋದ್ಗಾರದಿ ಸಭೆ । ಕರತಾಡನವಗೈದು । ಶರಧಿ ಘೋಷವ ಮಾಡಿತು ॥ ಪರಿಕಿಸುತಮರೇಂದ್ರ । ನುರಿದೆದ್ದ ನಯನದಿ । ಹರನಕ್ಷಿಗಿಡಿಯಾಡಿತು ॥ ೩ ॥

ರಾಗ : ಸೌರಾಷ್ಟ್ರ ತಾಳ : ತ್ರಿವುಡೆ

ಅರರೆ ಏನನ್ಯಾಯ ದ್ರೋಹವ । ಸರಸಿಜೋದ್ಭವ ಗೈದನರಿತಿದೆ ।ನೆರೆದ ಸಭೆಯನುಮೋದಿಸುವುದೇ । ಕರವ ಹೊಯ್ದು ॥ ೧ ॥ ತರಳೆಗೀಹುಲು ಹಾರ್ವನೆಂದಿರೆ । ಬರಿದೆ ತಿರುಗಿಸಲೇತಕೆನ್ನನು । ಅರುಹು ಮೊದಲೆನೆ ನಗುತಬುಜಭವ । ಸುರಪಗೆಂದ ॥ ೨ ॥

ರಾಗ : ಕೇದಾರಗೌಳ ತಾಳ : ಝಂಪೆ

ಪಾಕಶಾಸನ ಸೈರಿಸು । ಕೋಪವವಿ । ವೇಕ ಸಲ್ಲದು ಲಾಲಿಸು ॥ ವಾಕುಗೆಲಿದವನೀಕ್ಷಿಸು ॥ ದೈರ್ಘ್ಯತಮ । ಯಾಕಿನ್ನು ನುಡಿಯ ಬಳಸು ॥ ೧ ॥ ಲೋಕಪಿತ ನೀ ಸಟೆಯನು । ನುಡಿಯೆಹುಲು । ಲೌಕಿಕರ ಮಾಳ್ಕೆಯೇನು ॥ ನಾಕದಾಣ್ಮನ ಬಲವನು । ಮೀರಿಪನೆ । ಕಾಕುಮುನಿ ಜರಡನಿವನು ॥ ೨ ॥ ಅಮರಪತಿ ಬಲಗರ್ವದಿ । ಸೋತೆ ಗೌ । ತಮ ಗೆಲಿದ ಚಾತುರ್ಯದಿ ॥ ಗಮನಿಸಿಹುದಂತರ್ಯದಿ । ಮುನಿನಿಕರ । ಸಮನಿಸುವುದಿದ ತ್ವರ್ಯದಿ ॥ ೩ ॥

ರಾಗ : ಕಲ್ಯಾಣಿ ತಾಳ : ಏಕ

ಕೇಳುತ ಗುರು ಮುದ । ತಾಳಿದ । ಇಂದ್ರ । ತಾಳುತಾಳೆನುತೆದ್ದ ಪೇಳಿದ ॥ ಪಲ್ಲ ॥ ಹಾಳುಕ್ರೋಧವ ತೆಗೆ । ಪೇಳುವೆನಿದ್ದುದ । ಕೇಳುತ ॥ ಅ. ಪ. ॥ ಬಲವೊಂದೆ ಸಾಲದು ಗೆಲುಮೆಗೆ । ಬುದ್ಧಿ ಮಿಲನ ಬೇಕೈ ಸಿದ್ಧಿಯೊಲುಮೆಗೆ ॥ ಗೆಲಿದ ಗೌತಮ ಯುಕ್ತಿ । ಯಲಿಸರ್ವಂದಿರಿಗೆ ॥ ಕೇಳುತ ॥ ೧ ॥ ಈ ಕಮಲಜನಲ್ಲೆ । ಲೋಕವು । ಇದೆ । ತಾಕಾಂಬುದದರ ವಿ । ವೇಕವು ॥ ತಾಕುಳಿತನು ಸುತ್ತಿ । ಸಾಕಲ್ಯವಾಕುವು ॥ ಕೇಳುತ

Scanned by CamScanner

॥ ೨ ॥ ಸತಿಪತಿಗಳನಭಿ । ನಂದಿಸು । ಲೋಕ । ಪಿತನ ಪದಾಬ್ಜಕೆ । ವಂದಿಸು ॥ ಪತಿಯ ಸಹಿಸು ಧರ್ಮ । ಚ್ಯುತನಲ್ಲವೆನ್ನಿಸು ॥ ಕೇಳುತ ॥ ೩ ॥

ಭಾಮಿನಿ

ಗುರುವಚನ ಸನ್ಮಾನ್ಯ ಗೌತಮ । ನಿರುವ ಮೊಮ್ಮಗ ನಿನಗೆ ಶಂಕೆಯ । ತರುವುದಿದು ಪರಿಹಾರವೇನೆಂದೊರೆದನಮರೇಂದ್ರ ॥ ಮರುಳೆಕೇಳಾಚಾರ್ಯನುಡಿಯುರು । ತರವು ಸಂಶಯ ನಾಶಕಾರಿಯು । ದುರುಳತನವಿದ ತ್ಯಜಿಪುದೆಂದನು ಸುರಪಗಾಜೀವ ॥ ೧ ॥

ರಾಗ : ಸಾಂಗತ್ಯ ತಾಳ : ರೂಪಕ

ಗುರುವಿಂತು ಝುಂಕಿಸೆ । ಸುರಪನಾಚುತಲೈದಿ । ಶರಜಜನ್ಮಿಯ ಪಾದಕೆರಗಿ ॥ ತರಳನ ಬಾಲಿಶಾ । ಚರಣೆಯ ಕ್ಷಮಿಸೆಂದು । ತೆರಳಿದ ಮನದಿ ತಾ ಕರಗಿ ॥ ೧ ॥ ಇತ್ತಲಬುಜಭವ । ಪುತ್ರಿಯ ಪ್ರಾದ್ವೇಷ । ಗಿತ್ತನು ವಿದ್ಯುಕ್ತನಾಗಿ ॥ ತಪ್ತ ಮೌನಿಗಳಜ । ರಿತ್ತಾಶೀರ್ವಾದವ । ಪೊತ್ತು ಸಾಗಿದನು ಲೇಸಾಗಿ ॥ ೨ ॥ ರಮಣಿಯೊಡನೆ ತನ್ನಾ । ಶ್ರಮದೆಡೆಗೈತಂದು । ಸುಮೂರ್ತದಲಿ ಪ್ರವೇಶಿಸುತ ॥ ಪ್ರಮದೆಯಳಲಿ ಕಾಲ । ಕ್ರಮದಿ ಪುತ್ರನ ಪೊಂದಿ । ಯಮಿಪನಿರ್ದನು ವಿಶ್ರಮಿಸುತ ॥ ೩ ॥

ಇತಿ ಪ್ರಥಮ ಪರ್ಯಾಯಃ

ಅಥ ದ್ವಿತೀಯಃ

ವಾರ್ಧಿಕ್ಯ

ಪುತ್ರಕಾಮದಿ ಯಕ್ಷಪತಿ ಸುಕೇತಕ ಫಾಲ । ನೇತ್ರ, ವರದಿ ಸಹಸ್ರ, ಹಸ್ತಿಬಲಯುತೆ ಸುತೆಯ । ಹೆತ್ತು ತತ್ಕುಲಜ ಜರ್ಝರನಣುಗಗಿತ್ತರವ ಸತ್ತನನುಜಾತನಿಂದ ॥ ಮತ್ತವಳೆ ತಾಟಕಿಯು ಅತ್ಯಧಿಕ ರೂಪವತಿ । ಪೃಥ್ವಿಗಿಳಿಯುತ ಕುವರರೊತ್ತಿನಲಿ ಕಲುಷವನ । ದತ್ತ ಬಂದಿರುತೊಂದು ಹೊತ್ತು ಕಾಮವಿಕಾರವೆತ್ತು ಸುತರನ್ನರಸುತ ॥ ೧ ॥

ರಾಗ : ಬೇಗಡೆ ತಾಳ : ತ್ರಿವುಡೆ

ಪೊರಟಳು ಘನಕೋಮಲೆ । ಕಾರಡವಿಯ । ಚರಿಸುತ ಮತಿಭ್ರಮಲೆ ॥ ಪಲ್ಲ ॥ ಪೊರಟಳಾ ತಾಟಕಿಯು ವಿರಹದಿ । ಕರಗಿ ನಾನಾದೆಸೆಯನರಸುತ ॥ ತರಳರಹ

ಮಾರೀಚ ಸುಭುಜರ । ವೆರೆದು ಪುರುಷರ ಸ್ಮರಿಸುತಾಗಳೆ ॥ ಪೊರಟಳು ॥ ಅ. ಪ. ॥ ತಕ್ಕ ಪ್ರಾಯದ ಪುರುಷ । ಈಗಿಲ್ಲಿಯೆ । ಸಿಕ್ಕಿರೆನಿತು ಹರುಷ ॥ ಉಕ್ಕುತ ॥ ಪಿಡಿದೊಡನುಡೆಗೆ ಕೈ । ಯಿಕ್ಕುತ । ತೊಟ್ಟೊಸನಗಳ ಬಿ । ಚ್ಚಿಕ್ಕುತ । ನಗ್ನವಗೊಳಿಸಿ ನಸು । ನಕ್ಕು ತಾ ॥ ಮುತ್ತಿಕ್ಕುತ ॥ ತಕ್ಕುತರಿಕಿಟ । ಧಿಕ್ಕುಧಿಕುಕುಣಿ । ತಕ್ಕುಗಿಯೆ ಮದ । ವುಕ್ಕಿ ತೆಕ್ಕೆಗೆ ॥ ಬಿಕ್ಕು ಮದನನ । ಸೊಕ್ಕು ಮುರಿದಪೆ । ನಕ್ಕು ಮುದವೆನು । ತೊಕ್ಕಣಿಸುತಲಿ । ಪೊರಟಳು ॥ ೧ ॥

ಭಾಮಿನಿ

ಕನವರಿಸುತೀತೆರದಿ ಯಕ್ಷಿಣಿ । ಮನಸಿಜನ ವಶಳಾಗಿ ಬರುತಿರೆ । ಘನತಪಸ್ವಿಯಗಸ್ತ್ಯ ಪೊರಟಿರೆ ವನಜಭವ ಸಭೆಗೆ ॥ ವನಪಥದಿ ಸಾಗುತಿರೆ ಕಾಣುತ । ಅಣುಗರನು ಹಿಂದಿರಿಸಿ ಸಾರುತ । ಮನುಜನಲ್ಲಿವ ಮದನನಹ ಹಾಯೆನುತ ತಾಟಕಿಯು ॥ ೧ ॥

ರಾಗ : ನವರೋಜು ತಾಳ : ಆದಿ

ಪೇರಿಹ ಗಡ್ಡದ ಚಂದ । ಮೇ । ಲೇರಿರುವ ಜಟೆಯಂದ ॥ ಪೇರುರ ಭಸಿತ ಶ । ರೀರವದರ್ಬುದ । ಸೂರಿಯ ತೇಜವ ಬೀರುವಾನಂದ ॥ ೧ ॥ ನಿಡುಗಪ್ಪು ಕೊನೆಮೀಸೆ । ಹೇ । ರೊಡಲು ಕಣ್ಗೆತಮಾಷೆ ॥ ನಡೆಗವನೀತಲ । ನಡುಗುವ ದಾರ್ಢ್ಯತೆ । ಕಡುಬಲನೀತನ ಬಿಡೆನಿದು ಭಾಷೆ ॥ ೨ ॥

ಕಂದಾರ್ಧ

ಎಂದುಬ್ಬಿನೊಳಡ್ಡೈಸುತ । ಚಂದದಿ ಪಾಡುತ ಕುಣಿಯುತ ಬಂಧುರಗತಿಯಿಂ-

ರಾಗ : ದರ್ಬಾರಕಾನಡ ತಾಳ : ಏಕ

ಪ್ರಿಯಮನೋಜ । ತೇಜ । ದಯಪಾಲಿಸು ರಾಜ ॥ ಪಲ್ಲ ॥ ಬಯಕೆಗೆ ಸಹಜ । ವಯಸಿದುವೆ ನಿಜ । ಸುರಕುಜ । ತೈ ತೈ ತೈ । ತದಿನ ।ತಕದಿನದಿನ । ಪ್ರಿಯ ॥ ೧ ॥ ಇರಿಯಿತು ಬಸುರ । ಹಿರಿಯಿತು ಉಸುರ । ಸುಮಶರ ॥ ಘೂಂ ಘೂಂ ಘೂಂ । ಛನನ । ಛನ ನನನ ನನ ॥ ಪ್ರಿಯ ॥ ೨ ॥ ಸೇರಿಸು ಹೃದಯ । ಹೀರಿಸು ಸುಧೆಯ । ಓ ಪ್ರಿಯ । ತೋಂ ತೋಂ ತೋಂ । ತನನ । ತನನನ ನನ ॥ ಪ್ರಿಯ ॥ ೩ ॥

ಕಂದ ಉತ್ತರಾರ್ಧ

ಮುಂದರಿಯಲು ಮುನಿ ಹೇಸುತ । ಹಿಂದೆ ಸರಿಯಲೊತ್ತುತ್ತ ಬಹಳ್ಗೆಂದು ಖತಿಯಿಂ ॥ ೧ ॥

Scanned by CamScanner

ರಾಗ : ಸೌರಾಷ್ಟ್ರ ತಾಳ : ತ್ರಿವುಡೆ

ಭ್ರಷ್ಟೆ ತೊಲತೊಲಗಾಚೆ ತಲೆಗಿಲೆ । ಕೆಟ್ಟಿಹುದೆ ಬರಲೇತಕಿಲ್ಲಿಗೆ । ಕುಟ್ಟಿಕೆಡಹುವೆ ಮುಟ್ಟಬಂದರೆ ಕೆಟ್ಟ ಕೈಯ್ಯ ॥ ೧ ॥ ಕುಂಭ ಸಂಭವ ಸಿದ್ಧಿಗಂಜುವ । ರಂಬುಜಾಸನ ಸುರಪಮುಖ್ಯರು । ಮುಂಬರಿದು ಕೆಡಬೇಡ ಪೇಳೇ । ನೆಂಬ ನಿಜವ ॥ ೨ ॥

ರಾಗ : ಸುರುಟಿ ತಾಳ : ರೂಪಕ

ಗದರಬೇಡ ವಧುವು ನೋಡಾ । ಚದುರೆ ಯಕ್ಷಿಣಿ ॥ ಮದುವೆಯಾಗಿ ಮದನಕೇಳಿ । ಗೊದಗಿ ಸಲಹು ನೀ ॥ ೧ ॥

ರಾಗ : ಬೇಹಾಗ್ ತಾಳ : ಏಕ

ಒಳ್ಳೆ ಮಾತಿನಲ್ಲಿ ಪೇಳ್ವೆ । ಸಲ್ಲದಿದುವೆ ಕ್ಷುದ್ರೆ ॥ ಒಳ್ಳಿತಲ್ಲ ಸಲುಗೆ ಇಹಳು । ನಲ್ಲೆ ಲೋಪಾಮುದ್ರೆ ॥ ೧ ॥

ರಾಗ : ಸುರುಟಿ ತಾಳ : ರೂಪಕ

ಲಲನೆಯವಳು ಹಳಸು ನವ್ಯ । ಚೆಲುವೆಯೆನ್ನಯ ॥ಒಲವ ನೋಡು ಒಲಿದು ಕೂಡು । ಗೆಲವ ನಿನ್ನಯ ॥ ೧ ॥

ರಾಗ : ಘಂಟಾರವ ತಾಳ : ಅಷ್ಟ

ಭ್ರಷ್ಟಮಾತಿದ ಬಿಟ್ಟತ್ತ ತೊಲಗೆಲೆ । ದುಷ್ಟೆ ನಿಂತರೆ । ದೃಷ್ಟಿ ಪಾತದಿ । ಸುಟ್ಟು ಬೂದಿಯ ಗೈವೆನು ॥ ೧ ॥

ರಾಗ : ಶಂಕರಾಭರಣ ತಾಳ : ತ್ರಿವುಡೆ

ಸುಟ್ಟು ಕಳೆಯಲಿಕೇನಿಹುದು ಸ್ಮರ । ಸುಟ್ಟನಾಗಳೆ ತನುವನು ॥ ಬಟ್ಟುಕುಚಗಳ ಮುಟ್ಟುರತಿಸುಖ । ಕೊಟ್ಟು ಸಲಹು ॥ ೧ ॥ ಬಿಡೆನೆನುತ ಬಿಗಿದಪ್ಪಿ ಚುಂಬನ । ವಿಡಲಿಕವಳ । ಕೆಡಹುತ ॥ ಝುಡಿದನೆಡಗಾಲಿಂದ ಕೂಗಿದ । ಝೊಡನೆ ದುರುಳೆ ॥ ೨ ॥

ರಾಗ : ಘಂಟಾರವ ತಾಳ : ಅಷ್ಟ

ಕೇಳಿ ಬಂದರು । ಬಾಲರವ್ವೆಯ ಕೂಡಿ ॥ ಕಾಲನಾಳೆನೆ ದಾಳಿಸಿದರ್ಯತಿ । ಪಾಲ ರುದ್ರಾವೇಶದಿ ॥ ೧ ॥ ಶಾಪವಿತ್ತನು । ರೂಪಗರ್ವದೊಳಿಂತು ॥ ಪಾಪಗೈದೆಕು । ರೂಪಿ ರಕ್ಕಸಿ । ಯಾಪುವುದು ನೀನೆನ್ನುತ ॥ ೨ ॥ ಪೋರರೀರ್ವರು । ಘೋರ ದಾನವರಾಗಿ । ಕಾರಡವಿಯನು ಸೇರಿರೆನ್ನುತ । ಸಾರಿದನು ಮುನಿಯಾಕ್ಷಣ ॥ ೩ ॥

ಭಾಮಿನಿ

ಇತ್ತು ಶಾಪವನಿಂತಗಸ್ತ್ಯನು । ಸತ್ಯಲೋಕಕೆ ಸಾರ್ದನಿತ್ತಲು । ತೆತ್ತಹಲ್ಯೆಗೆ ಮನವ ತತ್ತರಿಸುತ್ತಲಮರೇಂದ್ರ ॥ ಎತ್ತಣೆನ್ನೈಸಿರಿಯು ಬಡಮುನಿ । ಯೆತ್ತಣವ ಸತಿಯಾದಳಾತಗೆ । ಮತ್ತಕಾಶಿನಿಯಗಲಿಕೆಗೆ ನಾ ಸತ್ತೆ ದಿಟವೆಂದ ॥ ೧ ॥

ರಾಗ : ಶೃಂಗಾರಕಾಪಿ ತಾಳ : ಅಷ್ಟ

ಅರರೆ ಏನ್ ಶೃಂಗಾರಕಣಿಯು । ಕುಚ । ವೆರಡು ಮನ್ಮಥನ ಕೂರಂಬಿನ ಮೊನೆಯು ॥ ಪಲ್ಲ ॥ ಸರಸಿಜಾಂಬಕಿಯು ಕಣ್ಮಣಿಯು । ಬಾಲ । ತರುಣಿ ಸಹಸ್ರಪ್ರಕಾಶದಾನನೆಯು ॥ ಅರರೆ ॥ ಅ. ಪ. ॥ ಸ್ಮರನ ಸಿಂಗಾಡಿ ಭ್ರೂಯುಗಳೆ । ಅಳಿ । ಗುರುಳೆ ರದನಕುಂದ ಸುಂದರ ಮುಗುಳೆ ॥ ವರಮಂದಸ್ಮಿತ ಚಂದುಟಿಗಳೆ । ಉರ ।ಕಿರಿವವು ಸರುವಥಾ ಸಹನ ವೀಜ್ವಾಲೆ ॥ ಅರರೆ ॥ ೧ ॥ ಒಂದು ಜಿಹ್ವೆಯೊಳಾಪುದೇನು । ಶೇಷ । ನಿಂದಲಸಾಧ್ಯ ಬಣ್ಣಿಸೆ ಸೌಂದರ್ಯವನ್ನ ॥ ಸುಂದರಿಯಳ ಮೈಸುಖವನು । ಒಮ್ಮೆ । ಹೊಂದದೆ ಬದುಕಿರೆ ನಾನು ॥ ಅರರೆ ॥ ೨ ॥ ಪತಿವ್ರತೆಯರ ಸ್ತನಯುಗಳ । ಮೃಗ । ಪತಿದಂಷ್ಟ್ರದಡಗು ಸಾಮ್ರಾಟರಾಸ್ತಿಗಳ ॥ ಅತಿಕ್ರಮಗಂಟಲಗಾಳ । ಬುದ್ಧಿ । ಚತುರತೆಯಿಂದ ಸಾಧಿಸುವೆ ಕಾರ್ಯಗಳ ॥ ಅರರೆ ॥ ೩ ॥

ಕಂದಪದ್ಯ

ಅನಿಮಿಷಪತಿ ಭೇದವನಿಂ । ತೆಣೆಸುತ ಪೊರಮಡಲತ್ತಲ್ ಮುನಿ ಧೈರ್ಯ್ಯತಮಂ ॥ ಉಣುತಾನಿಶಿಯಂಗನೆ ಸಹಿ । ತನುವಿಂದಿರಲಿಕಹಲ್ಯೆಯುಮಣಿಯುತ ಪತಿಗಂ ॥ ೧ ॥

ರಾಗ : ಸೋಹನಿ ತಾಳ : ಏಕ

ಕನಸ ಕಂಡೆನು ನಿನ್ನೆ । ದಿನ ನಸು ಮುಂಜಾನೆ । ಮನ ನೆನೆದದರನ್ನೆ । ಘನಿಸಿತು ಬವಣೆ ॥ ನಿನಗೆಂದೆ ನಿನಿತನ್ನೆ । ಎಣಿಸದೆ ಕವಲನ್ನೆ । ವನಿತೆಯ ಮನಸನ್ನೆ ।ತಣಿಸು ಮಹಿಮನೆ ॥ ೧ ॥ ನಾ ಒಬ್ಬಳಿಹ ಹೊತ್ತು । ಹಾವೊಂದು ಬಂದಿತು । ತೀವಿಯಿಂ ನುಂಗಿತು । ಸಾವೆನಗಾಯ್ತು ॥ ಭಾವದಿ ಭಯವಾಯ್ದು ಕೋವಿದಗೆಂದಾಯ್ತು । ಯಾವುದಿಹುದೋ ಕುತ್ತು ದೇವಗೆ ಗೊತ್ತು ॥ ೨ ॥

ರಾಗ : ಸೌರಾಷ್ಟ್ರ ತಾಳ : ತ್ರಿವುಡೆ

ಎನಲು ನಸುನಗುತೆಂದ ಮುನಿಪತಿ । ಕನಸು ತಾ ನನಸೆಂದಿಗಾಗದು । ಮನದಿಭಯವಿದಕ್ಯಾಕೆ ತೆಗೆತೆಗೆ । ವನಜನೇತ್ರೆ ॥ ೧ ॥ ಕಳವಳವು ಬಿಡದೆನ್ನ

Scanned by CamScanner

ಪ್ರಿಯಕರ । ಬೆಳಗು ಜಾವದಿ ಕಂಡ ಕನಸದು । ಫಲಿಸದಿರದಿದೆ ಚಿಂತೆಯೆಂದಳು । ಸುಲಲಿತಾಂಗಿ ॥ ೨ ॥ ತ್ರಿಣಯ ಹರಿಬ್ರಹ್ಮಾಮರೇಂದ್ರರ । ಗಣಿಸೆಮುನಿನಾ ಬಿನುಗನಲ್ಲೆಲೆ । ವನಿತೆ ನಿನ್ನನು ತುಡುಕ ಬಂದರೆ । ಹಣಿವೆ ವಿಧಿಯ ॥ ೩ ॥

ವಾರ್ಧಿಕ

ಹೀಗೆನುತ ಧೃಢದಿ ನಿದ್ರಾಗಾರಕೈದೆ ಶತ । ಯಾಗ ಹೊಂಚಿರೆ ಸಮಯ ತಾಗಿದುದು ನಡುರಾತ್ರಿ । ಕೂಗಿದನು ಕುಕ್ಕುಟದೊಲಾಗ ಗೌತಮನುದಯವಾಗಿ ಹೋಯ್ತೆನುತೇಳುತ ॥ ಸಾಗೆ ಪ್ರಾತರ್ವಿಧಿಗೆ ಧೃರ್ಷ್ಯತಮ ವೇಷದಿಂ । ಬಾಗಿಲಿಗೆ ಬಂದಿಂದ್ರ ನಾಗವೇಣಿಯ ಕರೆದರಾಗರುವೆಯೆದ್ದು ಬೆರಗಾಗಿ ಕದದೆರೆಯಲೊಳಪೋಗಿ ಕಾಪಟಿ ನಗುತಲಿ ॥ ೧ ॥

ರಾಗ : ಖಮಾಚ್ ತಾಳ : ಏಕ

ತುಂಬೆಗುರುಳೆ ಬಾ । ಚುಂಬಿಸುಗಾಢದಿ । ಕುಂಭಕುಚಂಗಳನೆದೆಗೊತ್ತು ॥ ಹಂಬಲವಿದು ಹೊಲಸೆಂಬೆನು ತೆಗೆತೆಗೆ । ಅಂಬುಜ ಸಖನುದಿಸುವ ಹೊತ್ತು ॥ ೧ ॥ ಸಂದಿಹುದರೆ ನಿಶಿ । ಸುಂದರಿ ನಿನ್ನನು ಹೊಂದಲು ಬಂದೆನು ಕಾಮದಲಿ ॥ ಸಂದ ಮುನಿಗಳರಿವೃಂದವ ಗೆಲಿದವ । ಕುಂದತರರು ನಿಜ ನೇಮದಲಿ ॥ ೨ ॥ ಜಡಜಭವಾದ್ಯರ । ಕೆಡಿಸಿರುವನು ಸ್ಮರ । ಬಡಮುನಿಯೆನ್ನಯ ಪಾಡೇನು ॥ ಹುಡುಗಿಯೆ ನಾ ಸುರ । ಬೆಡಗಿಯೆ ನಿಯಮಿತ । ಮಡದಿಯೊಳೀ ಹೊಸ ಮಾತೇನು ॥ ೩ ॥

ರಾಗ : ಸುರುಟಿ ತಾಳ : ಏಕ

ಹೊಸತಲ್ಲಿದು ಜಾಣೆ । ನಾ ಸುಮ । ನಸರೊಡೆಯನು ಕಾಣೆ ॥ ಶಶಿಮುಖಿಗೊಲಿದೀ । ರಸೆಯ ನಲಿದೆ ರುಷಿ । ಎಸಗುತ ಮೋಸವ । ವಶಗೈದಿರುವನೆ ॥ ೧ ॥ ಎನುತ ನಿಜವ ತೋರಿ । ಕಿರುನಗೆ । ನನೆಯಮಳೆಯಬೀರಿ ॥ ವನಜಾನನೆ ಬಾ । ತನುವನಲಂಗಿಸು । ಕ್ಷಣದಲಿ ಕೊಲುವನು । ಮನುಮಥ ಮೀರಿ ॥ ೨ ॥ ಮಾನಿನಿ ಕಿಡಿಯಿಡುತ । ಕೊಬ್ಬಿದ । ಕೋಣನೆ ತೊಲಗತ್ತ ॥ ಮಾನವನುಳಿದೀ । ಹೀನತೆಯೇ ಸತಿ । ಏನೆಂದರಿದೆಯ । ಮಾನುಷನಾಥ ॥ ೩ ॥

ರಾಗ : ಮೋಹನ ತಾಳ : ಏಕ

ಮೂರು ಲೋಕಾಧಿಪನ ಭೋಗ । ಕಾರುಹಿಮ್ಮೆಟ್ಟುವರು ॥ ಸಾರಿ ಬಂದ ಸ್ವರ್ಗ ಭಾಗ್ಯ । ನಾರಿ ಒಂದಟ್ಟದಿರು ॥ ೧ ॥

ರಾಗ : ಮಾರವಿ ತಾಳ : ಏಕ

ಸುಡುಸುಡು ನಿನ್ನಯ । ಕಡುಹನು ಸಿರಿಯನು । ದಡಿಗನೆ ಬಾಯ್ಮುಚ್ಚು ॥ ಒಡಲಾಣ್ಮನ ಮೈಕಡೆಗೂದಲಿಗೆಣೆ । ಬಿಡಿಪೆ ನಿನಗೆ ಹುಚ್ಚು ॥ ೧ ॥

ಭಾಮಿನಿ

ನಲ್ಲೆಯರ ಒಲ್ಲೆಯದು ಒಪ್ಪಿಗೆ । ಬಲ್ಲೆನೆಂದು ಬಿಡೌಜನಗುತಲಿ । ಚಲ್ವೆಯನು ಸೆಳೆದಪ್ಪಿದನು ವಿಧಿಯಲ್ಲಿ ಸವನಿಸಿತು ॥ ವಲ್ಲಭೆಯು ಜಾರಿದಳು ಗೌತಮ । ನಲ್ಲ ಮುಂಜಾವೆನುತ ಶಂಕೆಯೊಳಿಲ್ಲಿಗೋಡುತ ಕಂಡು ನಯನದಿ ಚಲ್ಲಿ ಕೆಂಗಿಡಿಯ ॥ ೧ ॥

ರಾಗ : ಭೈರವಿ ತಾಳ : ಅಷ್ಟ

ಘಡ ಸುರಾಧಮನೆ ನೀನು । ಎನ್ನರಸಿಯ । ಕೆಡಿಸೆ ಮೋಸವಗೈದನು ॥ ಕೊಡುವೆ ಶಾಪವನಿದ । ಹಿಡಿಯೆಂದು ಕರದೊಳು । ಜಡವಕೊಳ್ಳುತಲೆಂದನು ॥ ೧ ॥ ಯೋನಿ ಲಂಪಟ ಪಾತಕಿ । ಸಾವಿರ ಭಗ । ವಾಸು ಮೈಯೊಳು ಘಾತಕಿ ॥ ಶೂನ್ಯವಾಗಲಿ ಶಿಶ್ನ ಮೇಣ್ ವೃಷಣಗಳೆಂದ । ತಾನು ಜಲವನು ಸೋಕಿ ॥ ೨ ॥ ಖಳನರಾತ್ರಿಯ ಕಾಲದಿ । ನಾನಿಲ್ಲದಾ । ಗೊಳಹೊಗಿಸಿದ ಮೂಲದಿ ॥ ಶಿಲೆಯಾಗಿ ಬಿದ್ದಿಹು । ದಿಳೆಗೆಂದಹಲ್ಯೆಗೆ । ತಳಿದ ಶಾಪವ ಜಲದಿ ॥ ೩ ॥

ಭಾಮಿನಿ

ನುಡಿಗೆ ಕಂಪಿಸುತಶನಿ ಹೊಯ್ಲಿಂ । ಗುಡಿವ ಸುರತರುವೆನೆ ಮಹಾಸತಿ । ಕೆಡೆದುದೊಪ್ಪನೆ ಪತಿಯ ಪಾದವ ಹಿಡಿದು ರೋದಿಸುತ ॥ ಒಡಲರಸ ನೀನಲ್ಲದನ್ಯರ । ಕಡೆ ನಯನದಲು ಕಂಡಳಲ್ಲವು । ದೃಢವಿದೆನ್ನದನರಿತು ಶಪಿಸುತ ಕಡಿವಿರೇ ಕೊರಳ ॥ ೧ ॥

ರಾಗ : ನೀಲಾಂಬರಿ ಸಾಂಗತ್ಯ ತಾಳ : ರೂಪಕ

ಒಪಮನ್ನಿಸು ತವ । ರೂಪಧ್ವನಿಗಳಿಂದ । ಆಪಿಸುಣನು ಬಂದು ಕರೆದ ॥ ನಾಪೋಗಿಸಿದೆನೊಳ । ಗೀ ಪಾಪಿ ರತಿಗನು । ಪಾಪುದೆನುತಲೆನಗೊರೆದ ॥ ೧ ॥ ಕಾಲವಲ್ಲೆನುತನಿ । ಪಾಳಿಸಿದೆನುಸುರ । ಪಾಲ ತಾನೆನುತ ಮುಂದರಿದ ॥ ತೋಳ ಬಲದೊಳೆನ್ನ । ಬೀಳಿಸುತವನಿಗೆ । ಖೂಳಕೆಡಿಸಿದನಾದರದ ॥ ೨ ॥ ಪರ್ವದಮಿತ ಕ್ರೋಧ । ಗರ್ವದಿ ಶಪಿಸಿದೆ । ಸರ್ವಾಂಗಶುದ್ಧೆ ನಾನಿದಕೆ । ಶರ್ವ ಸಾಕ್ಷಿಯಿದೆ ಸು । ಪರ್ವಾಧಮನೆ ದೋಷಿ । ಸರ್ವಜ್ಞ ಕ್ಷಮಿಸೆಂದು ಪದಕೆ ॥ ೩ ॥

Scanned by CamScanner

ಭಾಮಿನಿ

ವಂದಿಸುತ ಹೊರಳುತಿರೆ ಮುನಿ ದಯೆ। ಯಿಂದ ಋಷಿ ನುಡಿ ಹುಸಿಯದೆಂದಿಗು। ಮುಂದೆ ರಾಮನ ಪಾದಸ್ಪರ್ಶದಿ ಹೊಂದು ನಿಜ ತನುವ ॥ ಎಂದೊಡನೆ ಶಿಲೆಯಾದಳಂಗನೆ। ಕುಂದಿದುದು ಪುಂಸತ್ವ ನಖ ಶಿಖ। ಬಂದ ಯೋನಿಯ ಕಂಡು ಕಾಲ್ಪಿಡಿದಿಂದ್ರ ಗೌತಮನ ॥ ೧ ॥

ರಾಗ : ಶೋಕಭೈರವಿ ತಾಳ : ಝಂಪೆ

ಯತಿಪ ಭ್ರಾಂತಿಯೊಳಾನು । ಪತಿವ್ರತೆಯ ಕೆಡಿಸಿದೆನು । ಅತಿಪಾಪಿಗೈಸಿದೆನು। ಸತಿಯ ಶಿಲೆಯನ್ನು ॥ ೧ ॥ ಈ ಸೊಗಡು ಭಗವನ್ನು । ಸಾಸಿರವ ಪೊಂದಿದೆನು। ಪುಂಸತ್ವವುಳಿದಾನು । ಹೇಸಿ ಬದುಕಿರೆನು ॥ ೨ ॥ ಈ ಕುರೂಪವ ಹೊತ್ತು। ನಾಕಕ್ಕೈದುವೆನೆಂತು । ಕಾಕುತನವಿದ ಮರೆತು। ನೀ ಕರುಣೆಯಾಂತು ॥ ೩ ॥ ಹರಿಯಾಜ್ಞೆ ಮತ್ಸತಿಯ। ಸ್ಮರಿಸುತಂಗಚ್ಯುತಿಯ। ಮರೆಸಿ ಮುನ್ನಿನ ಸ್ಥಿತಿಯ। ಕರುಣಿಸೆನಗಾರ್ಯ ॥ ೪ ॥

ಭಾಮಿನಿ

ಪರವಧುವ ತುಡುಕಿದನ ಬವಣೆಯು । ಧರಣಿಗಾದಾದರ್ಶಸಾಕ್ಷಿ। ಕರುಣೆಸೆಂದುರುಳುವನ ಮೊಗಕುಗಿದುರಿದು ಮುನಿನುಡಿದ ॥ ದುರುಳ ಕೃತಿಯಕ್ಷಮ್ಯ ಮನ್ನಿಸ। ಲರಿದೆನುತಲುರಕೊದೆದು ಸ್ತಂಭಿಸಿ। ಸುರಪತಿಯ ಕೆಡಹಿದನು ನಾರದ ಸರಿದ ದಿವಕಾಗ ॥ ೧ ॥

ರಾಗ : ದುರ್ಗಾ ತಾಳ : ರೂಪಕ

ಜಯತು ಜಯತು ಕೇಶವಾಯ । ಜಯ ಕೃಪಾಕರ। ಜಯ ನಮೋಸ್ತು ಮಾಧವಾಯ । ಜಯತು ಶ್ರೀಕರ ॥ ಪಲ್ಲ ॥ ರೂಪ ಲೇಪಲೋಪರಹಿತ। ಅಪವಾಸನೆ ॥ ಮೂಪೊಳಲ ನಿರ್ಮಾಪ ಸಲಹು। ವಾಪರೇಶನೆ ॥ ೧ ॥ ಎನುತ ತನ್ನ ಮನೆಗೆ ಬಂದ। ಮುನಿಗೆ ಪೌಲಮಿ । ಮಣಿದು ಕೇಳ್ದ। ಳೆನುವುದೊಸಗೆ । ಘನವ ಸಂಯಮಿ ॥ ೨ ॥ ಭರ್ತನಲ್ಲಿ ನಿತ್ಯಪೋಪ। ಸತ್ಯಕಾಮನು ॥ ಇತ್ತ ಬಂದ ಅರ್ಥವೇನ। ಮರ್ತ್ಯಪ್ರೇಮನು ॥ ೩ ॥

ರಾಗ : ಸಾಂಗತ್ಯ ತಾಳ : ರೂಪಕ

ಧವನೆಲ್ಲಿ ನಿನಗೆ ತ್ರೈ । ದಿವಕೆ ನಿನ್ನವಗೆ ಸಂ। ಭವಿಸಿತು ಸಾಹಸ್ರಯೋನಿ ॥ ಅವನತಮುಖನಾಗಿ। ಖುವಿಯೊಳು ಬಿದ್ದಿಹ। ಬವಣೆಯೇನೆಂಬೆನಿಂದ್ರಾಣಿ ॥ ೧ ॥

ಖಿಲ್ಲಮಾನಸದೊಳಹಲ್ಯೆಗಳುಪೆ ಯತಿ । ವಲ್ಲಭ ಗೌತಮನಿವಗೆ ॥ ಸಲ್ಲಿಸಿ ಶಾಪವ। ನೆಲ್ಲವಕಳೆದಿಹ। ಸೊಲ್ಲಿಸ ಬಂದೆ ನಾನಿನಗೆ ॥ ೨ ॥ ಜಾರಿತು ಪೌರುಷ। ತೋರಿತು ಭಗಹತ್ತು।ನೂರು ಸರ್ವಾಂಗಗಳಲ್ಲಿ ॥ ಕ್ರೂರನ ಕ್ಷಮಿಸನು । ದಾರನ ಬೇಡಿಕೊ। ಸಾರಲ್ಲಿ ನೀನೆ ಶೀಘ್ರದಲಿ ॥ ೩ ॥

ಭಾಮಿನಿ

ಕಲ್ಲಾದಳೇ ಸಾಧ್ವಿಯಾಣ್ಮನ। ಖಿಲ್ಲತನಕೇನೆಂಬೆ ಮುನಿಪತಿ। ಕೊಲ್ಲುದಾದರು ಕೊಲ್ಲಲಿದ್ದೇನೊಲ್ಲಭನನುಳಿದು ॥ ಫುಲ್ಲಲೋಚನೆ ಕರೆಯುತಪ್ಸರ। ನಲ್ಲೆಯರ ಗುರು ಸಚಿವ ಸಹಿತಲಿ। ನಿಲ್ಲದೋಡಿದಳೆಳೆಗೆ ಪೌಲಮಿ ಚಲ್ಲುತಶ್ರುವನು ॥ ೧ ॥ ನೋಡಿ ಶಚಿಶಿಲೆಯಾದಹಲ್ಯೆಯ। ಕೋಡಿವರಿವಶ್ರುಪ್ರವಾಹದಿ। ರೂಢಿಗುರುಳುತಲಿದ್ದು ಕಂಡಳು ಕೇಡಿ ತತ್ಪತಿಯ ॥ ಆಡಿಹುದು ನಯನದಲಿ ಕೆಂಗಿಡಿ। ಖೋಡಿಗಿದುವೇ ಶಾಸ್ತಿಯಾದರು। ಪಾಡು ಕೆಟ್ಟಿತು ತನ್ನದೆನ್ನುತ ಬೇಡಿದಳು ಮುನಿಯ ॥ ೫ ॥

ರಾಗ : ಸೋಹನಿ ತಾಳ : ರೂಪಕ

ಶಾಪಾನುಗ್ರಹಶಕ್ತ । ಕೋಪತಾಪ ವಿಮುಕ್ತ । ಪಾಪಗೈದಿಹನೆನ್ನಚಪ ॥ ನಾ ಪುತ್ರಿಗೀಶಿಕ್ಷೆ। ಯಾವುದೆ ಪತಿಭಿಕ್ಷೆ। ನೀ ಪದುಳದೊಳೀಯೊ ಮುನಿಪ ॥ ೧ ॥ ಯಮಿಕುಲಾಗ್ರಣಿಯೆ ಪೌ। ಲಮಿಯಲ್ಲೀ ತರಳೆ ಗೌ। ತಮಿಯೆಂದು ಕನಿಕರಪಟ್ಟು॥ ರಮಣನಕೃತ್ಯವ। ಕ್ಷಮಿಸಿ ಮುನ್ನಿನ ತೆರ। ಸಮನಿಸೆಂದಳು ಕಣ್ಣೀರಿಟ್ಟು ॥ ೨ ॥

ರಾಗ : ಪಂತುರಾವಳಿ ತಾಳ : ಅಷ್ಟ

ಅಳುತಿಂತು ಮುನಿಯ ಕಾಲ್ಪಿಡಿದಳು । ಬಾಷ್ಪ। ಜಲದಿ ಪಾದಂಗಳ ತೊಳೆದಳು ॥ ಉಳಿಸೆನ್ನ ತಂದೆ ನೀ ದಯದೊಳು। ಕಾಂತ। ನ ಲಘುದೋಷವ ಕ್ಷಮಿಸೆಂದಳು ॥ ೧ ॥ ಗುರುದೇವ ನಗುತೀ ಮನ್ವಂತರ । ಶಿವ । ನರಸು ತ್ರೈಜಗಕೆಂದ ಮಾವರ ॥ ಹರಿಯಾಜ್ಞೆಗಪ್ಪುದಭ್ಯಂತರ। ಇದ। ನರಿತು ಮನ್ನಿಸುವುದು ಸುಕುಮಾರ ॥ ೨ ॥

ಭಾಮಿನಿ

ಮೌನಿನುಡಿಸಟೆಯಾಗದೈ ಮಗು। ಯೋನಿಯದು ಕಣ್ಣಾಗಲನ್ಯರು। ಕಾಣದಾಗಲಿ ಪೌರುಷಾಂಗವ ನೀನನುಗ್ರಹಿಸಿ ॥ ಮಾನಿನಿಯ ಸಲಹೆನಲು ಗೌತಮ। ತಾನನಿತಕರುಣಿಸಿದ ವಂದಿಸು । ತಾ ನಿಮಿಷಪತಿ ಪೊರಟ ಗುರು ನಿಜರಾಣಿಯರ ಕೂಡಿ ॥ ೧ ॥

Scanned by CamScanner

ಕಂದಪದ್ಯ

ಕುಂದಕ ಮರೆಯಲ್ಯಾತ್ಮಾ । ನಂದವೆನುತ ಧೃಷ್ಟ್ಯಾತಮಂನಂದನ ಸಹಿತಂ ॥ ನಿಂದನು ತಪದೊಳು ಕಾಲವು । ಸಂದುದು ಮುಂಗಥೆಯೆಂದಪೆನೆಂದಂ ತ್ರಿಣಾಯಂ ॥ ೧ ॥

ಇತಿ ದ್ವಿತೀಯ ಪರ್ಯಾಯಃ

ಅಥ ತೃತೀಯ ಪರ್ಯಾಯಃ

ರಾಗ : ಸೌರಾಷ್ಟ್ರ ತಾಳ : ತ್ರಿವುಡೆ

ಇತ್ತಯೋಧ್ಯಾಪುರದಿ ದಶರಥ । ನಿತ್ತನೋಲಗವೊಂದು ದಿನ ಬುಧ । ಪತ್ತನಿಗ ಗುರುಮಂತ್ರಿ ಪಾಠಕ । ಮೊತ್ತದೊಡನೆ ॥ ೧ ॥ ಕರೆಸಿದನು ಸುತರಾಮಲಕ್ಷ್ಮಣ । ಭರತ ಶತ್ರುಹರೆನಿಪ ನಾಲ್ವರ । ಬರುತವರು ಪಿತಗೆರಗಿ ಕುಳಿತಿರೆ । ಹರುಷದಿಂದ ॥ ೨ ॥ ಕರವನಿತ್ತಡಿಗೆಡೆದ ಮಂಡಲ । ದರಸುಗಳ ಮನ್ನಿಸುತಲಜಸುತ । ನಿರಲು ಕೌಶಿಕ ಬಂದ ವಾರ್ತೆಯ । ಚರರು ಪೇಳೆ ॥ ೩ ॥

ಭಾಮಿನಿ

ಎಂದಡೀಕ್ಷಿಸಿ ನೃಪತಿ ದೂರದಿ । ಹೊಂದುತಾನಂದವನು ಮನದಲಿ । ಕಂದರೊಡನೊಡನೆದ್ದು ಸ್ವಾಗತ । ಕೆಂದು ಹೊರವಂಟು ॥ ಬಂದು ಮುನಿಪನನಾದರಿಸಿಕರೆ । ತಂದು ಪೀಠದಿ ಕುಳ್ಳಿರಿಸಿ ವಿಧಿ । ಯಿಂದ ಮಧುಪರ್ಕಾದಿ ಪೂಜೆಯ ನಂದದಿಂ ರಚಿಸಿ ॥ ೧ ॥

ರಾಗ : ಕೇದಾರಗೌಳ ತಾಳ : ಅಷ್ಟ

ಜನಪಸಾಷ್ಟಾಂಗವಂ । ದನೆಗೈದು ಕೇಳಿದ । ಮುನಿಪನತ್ಯಪರೂಪದಿ ॥ ಎನಗೆ ದರ್ಶನವಿತ್ತೆ । ಜನುಮಸಾರ್ಥಕಪದ । ವನಜವಿದರ ಸ್ಪರ್ಶದಿ ॥ ೧ ॥ ಕಾರ್ಯವಿಲ್ಲದೆ ಪೋಗ । ರಾರ್ಯರೆಲ್ಲಿಯು ಮುನಿ । ವರ್ಯನೀ ಕರುಣದಿಂದ ॥ ತ್ವರ್ಯದಿ ಪೇಳ್ವುದಂ । ತರ್ಯವನೆನೆಯತಿ । ಯರ್ಯಮ ಕುಲಜಗೆಂದ ॥ ೨ ॥

ರಾಗ : ನಾದನಾಮಕ್ರಿಯೆ ತಾಳ : ಅಷ್ಟ

ಜನಪಾಲ ಕೇಳೆಮ್ಮ ಬವಣೆಯ । ಏನ । ನೆನಲಯ್ಯೊ ದನುಜರಂಗವಣೆಯ ॥ ಪಲ್ಲ॥
ಯಾಗಯೋಗಾಭ್ಯಾಸವಡಗಿತು । ಪೂರ್ಣ । ವಾಗಿ ವೈದಿಕ ಕರ್ಮವುಡುಗಿತು ॥
ಸಾಗದಾರ್ಯರ ಬಾಳೆಂದಾಯಿತು । ಆದ । ಕಾಗಿಯೆ ಬರವಿಲ್ಲಿಗಾಯಿತು ॥ ೧ ॥

ದುರುಳೆ ತಾಟಕಿ ಮಹಾಬಲಯುತೆ । ತ । ತ್ತರಳಮಾರೀಚ ಸುಭುಜರಂತೆ ॥ ನೆರವಿಯಸಂಖ್ಯವಿಹುದು ಮತ್ತೆ । ದಿನ । ತೆರವುಗೊಡದೆ ಕಾಡುವಳು ಧೂರ್ತೆ ॥ ೨ ॥ ಯಜ್ಞಕುಂಡವನೆಲ್ಲ ಕೆಡಿಸುತ್ತ । ಶಿಕ್ಯ । ರೆಜ್ಞೋಪವೀತವ ಹರಿಯುತ್ತ ॥ ಜಜ್ಜುವರುಪಟಳಕಂಜುತ । ಬಂದೆ । ಸಜ್ಜನ ನೀಕಾಯ್ವೆಯೆನ್ನುತ ॥ ೩ ॥

ಭಾಮಿನಿ

ಕೇಳುತೀವಾಕ್ಯವನು ಕಲ್ಪದ । ಕಾಲ ಭೈರವನಂತೆ ರೌದ್ರಾಭೀಳಲೋಚನನಾಗಿ ಕೆಡಹುತ ಲಾಲಿಯಲಿ ಕಿಡಿಯ ॥ ಖೂಳ ಶಂಬರ ಮುಖ್ಯದನುಜರ । ಕೋಳುಗೊಂಡೀ ದಶರಥನ ಬಿಲ್ಲಾಳುತನಕಿದಿರಹಳೆ ಖಳೆ ಹೆಮ್ಮಾಳಿ ತಾನೆನುತ ॥ ೧ ॥

ರಾಗ : ಮಾರವಿ ತಾಳ : ಏಕ

ಪೇಳಿದ ಮುನಿವರ । ಲಾಲಿಸು ಖೂಳರ । ಮೇಳವ ಸದೆದೀಗ ॥ ಪಾಲಿಪೆನೆಂದು ನೃ । ಪಾಲ ಸುಮಂತ್ರಗೆ । ಕಾಳಗಕತಿಬೇಗ ॥ ೧ ॥ ನೆರಹು ಚತುರ್ಬಲ । ಶರಧಿಯ ತಾಟಕೆ । ದುರುಳೆಯ ತರುಬುತ್ತ ॥ ಪರಿಭವಿಸುತತ । ತ್ತರಳರ ದಾನವ । ನೆರವಿಯ ಸವರುತ್ತ ॥ ೨ ॥ ಮುದಿಸುವೆ ಮುನಿಗಳ । ಮುದುಕನ ತೋಳ್ಬಲ । ದಧಟಿಂಗಜ ಭವರು ॥ ಬೆದರುವರೀಖಳ । ರಥಮರು ಗಣ್ಯರೆ । ಎದೆಗೆಡರರಿತವರು ॥ ೩ ॥

ರಾಗ : ಕಾಂಬೋಧಿ ತಾಳ : ಝಂಪೆ

ಹೊತ್ತುಗಳೆಯದೆ ಪೊರಡಿ । ರುತ್ಸಹದೊಳೆನೆ ಗಾಧಿ । ಪುತ್ರನೃಪಗೆಂದ ನಗೆಮೊಗದಿ ॥ ಪೃಥ್ವಿಪತಿಯತ್ಯಧಿಕ । ಸತ್ವಯುತ ಬಿಲ್ಲಾಳು । ಮತ್ತಿಲ್ಲವೆಣೆಯು । ಮೂಜಗದಿ ॥ ೧ ॥ ಆದರೆಲ್ಲವು ಕಾಲ । ಭೇದದಿಂ ಬದಲಹುದು । ಮೋದಲರಿದಿಂದವರಕಾದಿ ॥ ಆದುರುಳೆಸಾಹಸ್ರ । ದಾದುಭುತಗಜಬಲಳು ಭೇದಿಸಲು ಬೇರುಂಟು ಹಾದಿ ॥ ೨ ॥ ಆಗದದು ನಿನ್ನಿಂದ । ನಾಗೈವ ಮಖರಕ್ಷೆ । ಗಾಗಿ ತವ ತನುಜಾತರಾದ ॥ ರಾಘವನ ಕಳುಹು ಜತೆ । ಯಾಗಿ ಲಕ್ಷ್ಮಣ ಸಾಕು । ಈಗಳೆನ್ನೊಡನೆ ನೀನೆಂದ ॥ ೩ ॥

ಭಾಮಿನಿ

ನುಡಿಯದುವೆ ಶತಕೋಟಿ ಸಿಡಿಲಿನ । ಝಡಿತವಾಯ್ದದೆಯೊಡೆದು ದಶರಥ । ಕೆಡೆದ ಮೈಮರೆದಿಳಿಗೆಸುರಗಿರಿಕಡಿದು ಬೀಳ್ವಂತೆ ॥ ನಡುಗಿದುದು ಸಭೆಯರಸಚೇತನ । ವಡೆಯುತೊಯ್ಯನೆ ಬಿಡುತ ಕಂಗಳ । ಒಡಲ ತಾಪದಿ ಮುನಿಯ ಕಾಲ್ಗಳ ಪಿಡಿಯುತಿಂತೆಂದ ॥ ೧ ॥

ರಾಗ : ಸೋಹನಿ ತಾಳ : ಆದಿತ್ರಿವುಡೆ

ತಂದೆ ಲಾಲಿಸು ಪುತ್ರಕಾಮದಿ । ಒಂದು ಮತ್ತೊಂದೆನುತ ಮೂವರ । ಹೊಂದಿದೆನು ಪತ್ನಿಯರ ಸುತಜನಿ ಹೊಂದದಿರುವ ॥ ಖೇದವ ॥ ೧ ॥ ಹೊತ್ತು ಬಾಳಿದೆನಿಳೆಯೊಳಾನರು । ಪತ್ತು ಸಾವಿರ ವರುಷ ಕಡೆಯಲಿ । ಇತ್ತ ಶ್ರೀಹರಿಯಿಷ್ಟಿಮುಖದೊಳು । ಪುತ್ರರಿವರ ॥ ನಾಲ್ವರ ॥ ೨ ॥ ತೊರೆದು ಜೀವಿಸಲಾರೆನಳೆಯರ । ದುರುಳ ಖಳ ಹೆಮ್ಮಿತ್ತುಗಳ ಬಾಯ್ । ದೆರೆಗೆ ನೂಕಿಸಲಾರೆ ಸಹಯಕೆ । ಬರುವೆ ನಾನೆ ॥ ಮುನಿವನೆ ॥ ೩ ॥

ರಾಗ : ಮಾರವಿ ತಾಳ : ಏಕ

ಕೆರಳುವ ಕೌಶಿಕ ।ನರುವತ್ತರ ಭ್ರಮೆ । ಶಿರಕಡರಿತೊನಿನಗೆ ॥ ತರಳರ ನಾವೇ । ನರಿಯವೆ ಕೊಲಿಸಲು । ಇರುವುದೆ ಹಗೆಯೆಮಗೆ ॥ ೧ ॥ ಸ್ಪಷ್ಟವಖಿಲವೀ । ದೃಷ್ಟಪ್ರಪಂಚವು । ನಷ್ಟವಹುದು ರಾಯ ॥ ಬಿಟ್ಟರೆನೆಂಬೆಯ । ಪುತ್ರರ ಶ್ರೀಹರಿ । ಯಿಷ್ಟವನರಿತಿಹೆಯ ॥ ೨ ॥ ದಡಿಗರು ತೃಣಕೆಣೆ । ಜಡಜದಳಾಕ್ಷಗೆ । ಒಡನಾನಿಹುದರಿಯಾ ॥ ಹುಡುಗರ ನೊಯ್ಯದೆ । ಬಿಡೆನೆನೆ ಕೌಶಿಕ । ನುಡಿದನು ಗುರುವರ್ಯ ॥ ೩ ॥

ರಾಗ : ಕಾಪಿ ತಾಳ : ಅಷ್ಟ

ಕೇಳಯ್ಯಾ ದಶರಥ ಭೂಪ । ಮುನಿ । ಪಾಲ ವಿಶ್ವಾಮಿತ್ರನತುಲ ಪ್ರತಾಪ ॥ ಖೂಳರ ದಹಿಸುವಾಟೋಪ । ಇರ್ದು । ಬಾಲರೇಳ್ಗೆಗೆ ಬಂದ ತ್ಯಜಿಸೀ ವಿಲಾಪ ॥ ೧ ॥ ಪುತ್ರರಿಗಸ್ತ್ರ ವಿದ್ಯೆಯನು । ನಾನೇ । ಇತ್ತರು ಕೌಶಿಕ ತ್ರಿಣಯ ಸನ್ನಿಭನು ॥ ಮತ್ತದ ಸಂಪೂರ್ಣವನ್ನು । ಗೈವ । ನುತ್ತರೋತ್ತರವಕ್ಕು ಕಳುಹು ಬಾಲರನು ॥ ೨ ॥ ಆಗದು ನಿನ್ನಿಂದೀಕಾರ್ಯ । ಆದ । ರಾಗಮವರಿತು ಪೇಳಿಹ ಋಷಿವರ್ಯ ॥ ರಾಘವನಿಗೆ ತೃಣವಯ್ಯಾ । ಎನೆ । ಬಾಗಿಗಾಧಿಜಗೆಂದ ಧೈನ್ಯದಿ ರಾಯ ॥ ೩ ॥

ರಾಗ : ದುರ್ಗಾ ತಾಳ : ರೂಪಕ

ಆರ್ಯನಾಣತಿಯನಿ । ವಾರ್ಯ ಮತ್ತದು ಶಿರೋ । ಧಾರ್ಯ ಮನ್ನಿಸು ತಾಳಿ ಮುದವ ॥ ಸೂರ್ಯಾನ್ವಯಾತ್ಮಜ । ಶೌರ್ಯಸಂವರ್ಧನ । ಕಾರ್ಯಹೊಂದಿದೆ ನಿನ್ನ ಪದವ ॥ ೧ ॥ ಶೀತಾತಪಂಗಳ । ನಾಂತವರಲ್ಲೆಳೆ । ಪೋತರು ಬಳಲಿ ಕ್ಷುತ್‌ತೃಷೆಗೆ । ಕಾತರಿಸದ ತೆರ । ಪ್ರೀತಿಯಿಂದಲಿ ತನು । ಜಾತರ ಸಲಹೆಂದು ಮುನಿಗೆ ॥ ೨ ॥ ತನಯರನಿತ್ತಪ್ಪಿ । ಪಣೆಯ ನೊಸಲಿಗೊತ್ತಿ । ಮುನಿಯ ಯಾಗವಕಾಯ್ದು ಜವದಿ ॥ ಎನಗೆ ಕಾಣಿಸಿಕೊಂಬು । ದೆನುತ ಶೋಕಿಸೆ ರಾಮ । ಮಣಿದೆಂದ ಗಂಭೀರರವದಿ ॥ ೩ ॥

ರಾಗ : ಮಾರವಿ ತಾಳ : ಏಕ

ಮರುಕವ ತೆಗೆಯು । ಧ್ವರಕಂಟಕರನು । ತರಿಯುತ ಲೀಲೆಯಲಿ ॥ ಬರುವೆವು ಕೆಲದಿನ । ಸರಿವುದು ಮುನಿಗಳ । ಚರಣದ ಬಳಿಯಲ್ಲಿ ॥ ೧ ॥ ಮುನಿದರೆ ತ್ರಿಣಯನ । ಗಣಿಸೆ ಸುರಾಸುರ । ಗಣತೃಣಕೆಣೆಯೆನಗೆ ॥ ಅಣುಗನ ಬಾಣದ । ಮೊನೆಗಿಲ್ಲೆಳೆತನ । ವೆನುತೊಂದಿಸಿ ಪಿತಗೆ ॥ ೨ ॥

ಭಾಮಿನಿ

ಬಿಲುನಿಷಂಗವ ಧರಿಸಿ ಮುನಿಪದ । ಜಲಜಕೊಂದಿಸುತನುಜ ಸಹಿತಲಿ । ನಿಲಲವರ ಜೊತೆ ಪೊರಟು ಸರಯುವ ಕಳೆದು ಕೌಶಿಕನು॥ ತಿಳುಹಿ ಬಲವತಿಬಲರಹಸ್ಯವ । ನಲಘು ಮುಕ್ತಾಮುಕ್ತಸಿದ್ಧಿಯ ।ಸಲೆಚತುಷ್ಟಯ ವರುಹಿದನು ರಘುಕುಲಜ ಮುನಿಗೆಂದ ॥ ೧ ॥

ರಾಗ : ನವರೋಜು ತಾಳ : ಆದಿ

ಮುನಿಪ ಏನಿದು ಚಂದ । ಮೈ । ಮನಕಾಹುದಾವಂದ ॥ ಎನುವೆನದೇನೀವನಸಿರಿ ಪ್ರಕೃತಿಯ । ಘನವಿಭವವ ಕಂ । ಡೆನು ನಿಮ್ಮಿಂದ ॥ ೧ ॥ ಮುನಿಯೆಂದ ಪುರುಹೂತ । ವೃ । ತ್ರನಕೊಂದ ಘನದುರಿತ ॥ ವನು ಪದ್ಮಜ ತೊಳೆ । ದನುಮಿಲ್ಲಿಯೆತ । ದ್ವನನೆಲಪಿದಕಾ । ನನವಿದು ಕಲುಷ ॥ ೨ ॥

ಕಂದಪದ್ಯ

ತಕ್ಷಣ ಕುಂಭಜಶಾಪದಿ । ರಕ್ಕಸಿಯಾಗಿಹ ತಾಟಕಿಯುಕ್ಕಿದ ಹಸಿವಿಂ ॥ ಇಕ್ಕೆಲವರಸುತ ವನದೊಳು । ಸಿಕ್ಕಿದ ಖಗಮಿಗಗಳ ಬಾಯ್ಗಿಕ್ಕುತ ಜವದಿಂ ॥ ೧ ॥

ರಾಗ : ಭೈರವಿ ತಾಳ : ತ್ರಿವುಡೆ

ಬಂದಳು । ದೈತ್ಯೆ । ಬಂದಳು ॥ ಪಲ್ಲ ॥ ಬಂದಳಾ ತಾಟಕಿಯು ಮನುಜರ । ತಿಂದು ಬಹುದಿನವಾಯ್ತು ನಾಲಿಗೆ ॥ ಗೊಂದು ರುಚಿಸದು ಸುಡಲಿ ಬಾಳಿದು । ಎಂದು ಮನದಲಿ ಕುಂದಿಕುಂದುತ ॥ ಬಂದಳು ॥ ೧ ॥ ಸಿಕ್ಕಿದರೆ ನರ ತೆಕ್ಕೆಯಲಿ ಮುರಿ । ದುಕ್ಕಿ ಬಹ ಶೋಣಿತವ ನೆಕ್ಕುತ । ಚೊಕ್ಕಿಮಾಂಸವನಿಕ್ಕು ತೊಡಲಿಗೆ । ನಕ್ಕು ನಲಿವೆನು ಸೊಕ್ಕುತೆನ್ನುತ ॥ ಬಂದಳು ॥ ಆರೊ ದೂರದಿ ತೋರ್ಪರಹಹಾ । ಪೋರರೀರ್ವರು ಹಾರ್ವನೋರ್ವನು ॥ ಮಾರವೈರಿಯಪಾರ ಕೃಪೆಯನು । ತಾರುಭಟಿಸುತ ಘೋರದಾನವಿ ॥ ಬಂದಳು ॥ ೩ ॥

ರಾಗ : ಸೌರಾಷ್ಟ್ರ ತಾಳ : ತ್ರಿವುಡೆ

ಆರುಭಟೆಯದ ಕೇಳಿ ಕೌಶಿಕ । ನಾರಘೂದ್ವಹಗೆಂದನಸ್ತ್ರವ । ನೇರಿಸಿಹಳೇ

Scanned by CamScanner

ಮೊದಲಬಲಿಯ್ಯೆ । ಕ್ರೂರದನುಜೆ ॥ ೧ ॥ ಚಿಣ್ಣನನು ಮನ್ನಿಪುದು ಗುರುಗಳು
ಹೆಣ್ಣಕೊಲ್ಲುವನಲ್ಲ ದುರಿತವಿ । ದನ್ವಯಕೆ ಮುಳಿವೆಂದ ರಾಘವ । ಖಿನ್ನನಾಗಿ ॥ ೨ ॥
ಹೆಣ್ಣು ಗಂಡೆಂದಿಲ್ಲ ದನುಜರು । ಮಣ್ಣಗೂಡಿಸು ಮೊದಲು ಹತಿಯಿರ ।ಲೆ
ಸೇರಲಿಯೆಂದ ಮುನಿ ಮು । ಕ್ಕಣ್ಣನಾಗಿ ॥ ೩ ॥

ರಾಗ : ಭೈರವಿ ತಾಳ : ಅಷ್ಟ

ನುಡಿಕೇಳಿ ಶಸ್ತ್ರೌಘವ । ಶಿಂಜಿನಿಗಿಟ್ಟು । ತಡೆದು ದೈತ್ಯೆಯ ರಾಘವ ॥ ದಡಿಗತನವ
ತೋರ್ದ । ರೊಡಲ ಭೇದಿಸುವೆನು । ನಡಿಹೊತ್ತು ಸುಡು ಮೊಗವ ॥ ೧ ॥
ಅರೆತುತ್ತಿಗಹೆಯ ಪೋರ । ಒಮ್ಮೆಲೆ ಬಾಯಿ ।ಗಿರಿಸಿ ನಲಿವೆ ಮೂವರ ॥ ಕುರಿಗ
ಸಿಂಹಿಣಿಯೊಳು । ಸರಸವೆಯೆನೆ ಕಿಡಿ । ಗರೆದು ಮಾಗಧಿ ಕುವರ ॥ ೨ ॥
ಪೋರರೆಂಬೆಯ ನಿವಾಳಿ । ಒಂದಸ್ತ್ರದಿ । ಹೀರುವೆನಸುವ ಮೂಳಿ ॥ ನಾರಿಯೊ ನೀನು
ವಿ । ಕಾರಿಯೊ ಸಾಯದೆ । ಸಾರೆಂದ ಕಿಡಿಯುಗುಳಿ ॥ ೩ ॥

ರಾಗ : ಪಂತುರಾವಳಿ ತಾಳ : ಮಟ್ಟೆ

ನಾರಿಯಲ್ಲ ನಿಮಗೆ ಲಯದ । ಮಾರಿಯೆಂದಳು ॥ ಪಾರಣೆಯನು ಗೈವೆನೆನುತ ಕ್ರೂರಿ
ಬಂದಳು ॥ ಧೀರ ಲಕ್ಷ್ಮಣಾಂಕನುರಿಯ । ಕಾರಿಕಣ್ಗೊಳು ॥ ಪೇರುರಕ್ಕಪಾರಶರವ ।
ತೂರೆ ದಿಣ್ಣಳು ॥ ೧ ॥ ಕುಟ್ಟಿ ಮುರಿವುತದರ ಮುನಿಯ ದೃಷ್ಟಿಪಾತದಿ । ಸುಟ್ಟು ಕಳೆವ
ತೆರದಿ ನೋಡು । ತಟ್ಟಹಾಸದಿ ॥ ಮುಟ್ಟಬರಲು ರಾಮ ಶರದೊ । ಳಟ್ಟಿ
ರೌದ್ರದಿ ॥ ರಟ್ಟೆ ಕಡಿದು ಬಿದ್ದಳಿಳೆಗೆ ಬೆಟ್ಟದಂದದಿ ॥ ೨ ॥ ಹೊಡಕರಿಸುತಲೆದ್ದು
ತಲೆಯ । ಕೊಡವಿರಕ್ಕಸಿ ॥ ಎಡದಕರದಿ ಮರನ ಮುರಿದು । ಹಿಡಿಯಲೀಕ್ಷಿಸಿ ॥
ಜಡಜನಾಭ ಕಡಿದ ತೋಳ । ಬುಡವ ಗರ್ಜಿಸಿ ।ಜಯೆ ಪದವ ನೆಗಹಲೆರಡೂ ।
ತೊಡೆಯ ತುಂಡಿಸಿ ॥ ೩ ॥

ರಾಗ : ಭೈರವಿ ತಾಳ : ಏಕ

ಬಿನುಗು ನರರ ತರಿದುಂಬ । ಪರಿ । ಯೆನುವೆಯ ಎಮ್ಮನು ತಿಂಬ । ಘನಮದ
ಮೇಣ್ ಬಲಜಂಬ । ಎ । ಲ್ಲೆನು ತೆಸೆದನು ಕೂರಂಬ ॥ ೧ ॥ ಶರವರ
ತೃಣಕೆಣಸುತಲಿ । ಹರಿ । ದರುಣಜಲದೊಳುರುಳುತಲಿ ॥ ದುರುಳರೆ ತಿಂಬೆನೆನುತಲಿ ।
ಬೊ । ಬ್ಬಿರಿಯುತ ಬರೆ ಕಾಣುತಲಿ ॥ ೨ ॥ ಉರುತರ ಮಂತ್ರಾಸ್ತ್ರದಲಿ । ರಘು ।
ವರ ನಿಟ್ಟನು ಕನಲುತಲಿ ॥ ಉರವನುರುಹೆ ಕ್ಷಿಪ್ರದಲಿ । ಶರ । ಮರಣಿಸಿದಳು
ಖಳೆಯೊರಲಿ ॥ ೩ ॥

ಭಾಮಿನಿ

ಸಾರಿದನು ಮುನಿ ತನ್ನಿವಾಸಕೆ । ಭೂರಿ ಮಧುಪರ್ಕಾದಿ ಪೂಜೆಯ ।
ನಾರಘೂದ್ವಹಗಿತ್ತು ಮೇಣ್ ಸಂಭಾರಗಳ ನೆರಹಿ ॥ ವೀರರೀರ್ವರ ರಕ್ಷೆಯಿಂದಲ ।
ಪಾರ ಋಷಿಗಳ ಕೂಡಿ ಕೌಶಿಕ । ಭಾರಿ ಹೋಮವ ಗೈದ ಧೂಮವದೇರಿತಂಬರವ
॥ ೧ ॥

ರಾಗ : ಸೌರಾಷ್ಟ್ರ ತಾಳ : ತ್ರಿವುಡೆ

ಸುತ್ತ ನಾಲ್ದೆಸೆ ಮುಸುಕಿತದನು । ನ್ಮತ್ತ ಖಳ ಮಾರೀಚ ಕಾಣುತ । ತತ್ಸಹೋದರನಹ
ಸುಬಾಹುವ । ನೊತ್ತಿಕರೆದು ॥ ೧ ॥ ಹೋಮಧೂಮವದೇನು ನಮ್ಮೀ । ಸೀಮೆಗಿದುವೆ
ನಿಷೇಧ ಗೈವು । ದ್ದಾಮನಾವನೊ ನೋಳ್ಪರೆ ನಿ । ಸ್ಸೀಮ ಬಲವ ॥ ೨ ॥
ಮುನಿಯೆಕಣೆಯೊಂದರಲಿ ಲೋಕವ । ನೊಣೆವೆ ಹರಿಹರ ಸುರಪ ಮುಖ್ಯರ ।
ಗಣಿಸೆನೆನ್ನಾಣತಿಯ ಮೀರ್ದನ । ಹೆಣವನುಂಬೆ ॥ ೩ ॥

ರಾಗ : ಮಾರವಿ ತಾಳ : ಏಕ

ವ್ಯಗ್ರದಿ ದನುಜಕು । ಲಾಗ್ರಣಿ ದೈತ್ಯ ಸ । ಮಗ್ರರ ಕೂಡುತ । ನಿಗ್ರಹಿಸುವೆ ಬುಧ ।
ರುಗ್ರವನೆನ್ನುತ ॥ ಬಂದನಾಗ । ದಾನವ । ಬಂದನಾಗ ॥ ಪಲ್ಲ ॥ ಲಕ್ಷ್ಮಣನಿವರ ನಿ ।
ರೀಕ್ಷಿಸಿ ಕೆಂಗಿಡಿ । ದಕ್ಷಾರಿಯ ತೆರ । ನಕ್ಷಿಯೊಳುಗುಳುತ ॥ ಉಕ್ಕಿಸಿ ಧನುವಿಂ ।
ದಕ್ಷಯಶರವನು । ಲಕ್ಷದನುಜರನು । ತಕ್ಷಣ ಸವರಿದ । ಏನನೆಂಬೆ । ಸಾಹಸ ।
ವೇನನೆಂಬೆ ॥ ೧ ॥

ಭಾಮಿನಿ

ಪಡೆಯಳಿಯೆ ಮಾರೀಚ ಸುಭುಜರು । ಅಡಗಿ ಬಾಂದಳಕಡರಿ ಮಾಯದಿ । ಸಿಡಿಲು
ಮಿಂಚುಗಳೊಡನೆ ಕಲ್ಪದ ಕಡೆಯದಿನದಂತೆ ॥ ಅಡಚುತಲಿ ಗಾಢಾಂಧಕಾರವ ।
ಕೆಡಹಿದರು ತನಿಮಾಂಸರುಧಿರದ ॥ ಝುಡಿಮಳೆಯಕಂಡಂಜೆ ಋಷಿಗಳು
ಕಿಡಿಗೆದರಿರಘುಜ ॥ ೧ ॥

ರಾಗ : ಸೌರಾಷ್ಟ್ರ ತಾಳ : ತ್ರಿವುಡೆ

ಮುನಿಗಳಂಜದಿರಿದಕೆದುರುಳರ । ಹೆಣವತೋರ್ಪೆನು ನಿಮಿಷಮಾತ್ರದಿ ।
ಇನಕುಲಜರಂಗವಣೆಯರಿಯಲಿ । ದನುಜರೀಗ ॥ ೧ ॥ ಎನುತಧನುವಿಂಗನಿಲ
ಭಾಸ್ಕರ । ಕಣೆಗಳನ್ನಳವಡಿಸಿ ರಾಘವ । ಕ್ಷಣದಿ ಕಿವಿವರೆಗುಗಿದು ಬಿಟ್ಟನು ।
ಕನಲುತಾಗ ॥ ೨ ॥ ಕಡಿದು ಕತ್ತಲೆಯಡಗೆ ಸುರಿಮಳೆ । ದಡಿಗರನು ಕಂಡಾ
ರಘೂದ್ವಹ । ಪಡಿಶರವನೊಡನೆಚ್ಚು ಕೆಡಹಿದ । ಪೊಡವಿಗವರ ॥ ೩ ॥

ರಾಗ : ಭೈರವಿ ತಾಳ : ಅಷ್ಟ

ಎದ್ದು ಕೆಂಗಿಡಿಯಿಡುತ । ಸುಬಾಹುಕ । ರೌದ್ರದಿ ಬೊಬ್ಬಿಡುತ ॥ ಇದ್ದ ಹಾರ್ವರ ಪ್ರಬುದ್ಧ ಬಾಲರನೆಲ್ಲ । ಮದ್ದು ತೇಗುವೆನೆನುತ ॥ ೧ ॥ ಮುಂಬರುವನ ನೋಡುತ । ಲಕ್ಷ್ಮಣ ತಡೆ । ದಂಬುಗಳನು ಹೂಡುತ ॥ ಹುಂಬ ದಾನವ ತರಿ । ದಂಬುಜಸಖಸುತ । ನಿಂಬ ತೋರುವೆನೆನುತ ॥ ೨ ॥ ಹೊಡೆದ ಬಾಣವ ತುಂಡಿಸಿ । ಸುಬಾಹುಕ । ಹಿಡಿದ ಶೂಲವ ಗರ್ಜಿಸಿ ॥ ಒಡನದ ಖಂಡಿಸಿ । ಕಡುಹ ರಾಘವ ತಡೆ । ಗಡಿದ ದೈತ್ಯನ ಸಾಹಸಿ ॥ ೩ ॥

ರಾಗ : ಕೇದಾರಗೌಳ ತಾಳ : ಝಂಪೆ

ಮಡಿದ ತಮ್ಮನ ಕಾಣುತ । ಮಾರೀಚ । ಸಿಡಿಲಿನಂತಾರ್ಭಟಿಸುತ ॥ ಹಿಡಿದಿವರನೊಂದೆತುತ್ತ । ಗೈವೆನೆಂ । ದೊಡನೊದರಿ ಮುಂದೆ ಬರುತ ॥ ೧ ॥ ಹುಡುಗಕೇಳೆಮ್ಮ ತಳ್ಳಿ । ಕಾಲ್ಗಳನು । ತೊಡರಿ ಬೀಳಿಸುವ ಬಳ್ಳಿ ॥ ಮೃಢ ಹರಿವಿಧಿಗಳೆಮ್ಮಲಿ । ಹಗೆಗೆಳವೆ । ನಡುಗುವರು ಕೇಳ್ಜಜದಲಿ ॥ ೨ ॥ ನಳಿನಾಕ್ಷನೆಂದ ತರಳ । ರಹುದು ರಣ । ಕಲಿಗಳಾವಿದರ ತಿರುಳ ॥ ತಿಳಿಯದೀಗೊಬ್ಬದುರುಳ । ನಮ್ಮೊಳಸು ।ಗಳೆದ ಕುದುರೇನೊ ಮರುಳ ॥ ೩ ॥

ರಾಗ : ಭೈರವಿ ತಾಳ : ಅಷ್ಟ

ಕೊಲುವೆನೆನುತ ದಾನವ । ಶಕ್ತಿಯನೆತ್ತಿ । ಗಳಕಿಡಲಾಬಾಣವ ॥ ಘಳಿಲನೆ ಮುರಿದಿಕ್ಕಿ । ಪ್ರಳಯ ಪ್ರಭಂಜನ । ಹಿಳುಕನೆಚ್ಚನು ರಾಘವ ॥ ೧ ॥

ಭಾಮಿನಿ

ಸುತ್ತುತ್ತಾಗಸಕೆತ್ತಿಶರವದು । ಸಪ್ತಸಾಗರದಾಚೆ ಬಿಸುಡಿತು । ಮತ್ತಖಳ ಮೈಮರೆದು ಮಲಗಿದನಿತ್ತ ಕೌಶಿಕನು ॥ ಸತ್ರವನು ಪೂರೈಸಿದನು ಮೇಣ್ । ಋತ್ವಿಜರು ಸಂತುಷ್ಟರಾದರು । ಪತ್ರದೊಡನೈತಂದು ಮಿಥಿಲಾ ಪೃಥ್ವಿಪನ ಚರರು ॥ ೧ ॥

ರಾಗ : ಮುಖಾರಿ ತಾಳ : ಏಕ

ಯಾರಪ್ಪೊಹಿಲ್ಲಿ ಹಿಸ್ವಾಮಿತ್ರ । ಯೆಂಬುವ ಆರ್ವ । ರೂರಪ್ಪಗೈತೆ ವಂದು ಪತ್ರ ॥ ಪಲ್ಲ ॥ ಸಾರಿದ ಸಿವದಣು । ವೇರಿಸಲವಗೆ ಕೊ । ಮಾರಿಯೆನುತ ಜಗ । ಮೂರಕೆದಾತ ॥ ಯಾರಪ್ಪೊ ॥ ಅ. ಪ. ॥ ಆರಾಯ ಜಣಕ ಮಿತ್ಲಾಪಟ್ಲ । ಆಯಮ್ಮ ಶೀತಾ । ನಾರಿಗಾಯಿತು ಹಿಳೆಯಿಂದುಟ್ಲ ॥ ಯಾರ‍್ಯಾರೋ ಬಂ । ದ್ವೇರಿಸೆ

ಬಲ್ಲನು । ಒರಿದರಪ್ಪೋ । ಕಾಯುತ ಕೈತವ । ನೂರಿಗೆ ಪೋದರೊ । ದಾರಿಲಿ ಸತ್ತರೊ ॥ ಯಾರಪ್ಪೋ ॥ ೧ ॥

ರಾಗ : ಕಾಂಬೋಧಿ ತಾಳ : ಝಂಪೆ

ಚರರು ಪತ್ರವನಿತ್ತು । ತೆರಳಿದರು ಮುನಿಪನದ । ತೆರೆದು ವಾಚಿಸುತ ನಸುನಗುತ ॥ ಸುರ ಭುಜಗ ಭೂಭುಜರು । ಸರಿಪದಾದರು ಧನುವ । ಬರಬಹುದು ಪ್ರಬಲ ಬುಧರೆನುತ ॥ ೧ ॥ ಬರಹವದ ಕೇಳುತ್ತ । ಕೆರಳುತಲಿರಘುಜಾತ । ಅರುಹಲಿಲ್ಲೆಮಗೊಂದು ಮಾತ ॥ ತರಣಿಕುಲಸಂಭೂತ । ರುರು ಬಾಹು ಸಾಮರ್ಥ್ಯ । ಮರೆಯಬಹುದೇ ಪ್ರಮತ್ತ ॥ ೨ ॥ ಚಿಕ್ಕವರು ನೀವು ವಾ । ಧಿಕ್ಕ ತನಗೆಂದೆನುತ । ಒಕ್ಕಣಿಸಲಿಲ್ಲ ತವಜನಕ ॥ ತಕ್ಕಮಾನವನೀವು । ದಕ್ಕೆ ತಪ್ಪುವನಲ್ಲ । ಮಿಕ್ಕ ಜ್ಞಾನಿಯು ರಾಯ ಜನಕ ॥ ೩ ॥

ರಾಗ : ಮಧುಮಾಧವಿ ತಾಳ : ತ್ರಿವುಡೆ

ಮುನಿಪತಿಯ ನುಡಿಗೊಪ್ಪಿ ರಾಘವ । ಧನುವದೆಲ್ಲಿಯದೆಂತು ದೊರಕಿತು । ಜನಕನಿಗೆ ಪೇಳೆಂದ ಪಾದದಿ । ಪಣೆಯನಿರಿಸಿ ॥ ವಂದಿಸಿ ॥ ೧ ॥ ಹರಪರಶುಧರಗಿತ್ತ ಕ್ಷಾತ್ರವ । ಸರಿಯುತವನ್ಯಾಸದಲಿ ಜನಕನೊ । ಳಿರಿಸಿದನು ಸುತೆಯಳೆದಳದ ಪಣ । ಕಿರಿಸಿರುವನು ॥ ರಾಯನು ॥ ೨ ॥ ಸುರನರೋರುಗರಿಂಗೆ ಮಣಿಯದ । ಹರಧನುವ ನಾನೊಮ್ಮೆ ಕಾಂಬೆನು । ಕರುಣದಿಂ ಕರೆದೊಯ್ಯುದೆನೆ ಮುನಿ । ತರಳರೊಡನೆ ॥ ಬೇಗನೆ ॥ ೩ ॥

ವಾರ್ಧಿಕ

ಆತಪೋಧನರೈದಿ ಸಾತಿಶಯ ದೂರದಿಶಿ । ಲಾ ತಪಸ್ವಿನಿ ಮಲಗಿದಾತಾಣಮಂ ಪೊಕ್ಕ । ಡಾತಿರಲಿಕಲ್ಲಿ ನಿರ್ವಾತ ಸರ್ವಸ್ತಬ್ಧ ಪ್ರೇತಕಳೆಯಂ ಕಾಣುತ ॥ ಕಾತರಿಸಿ ರಘುಜ ನಿಜ ಮಾತೆಕರೆದಂತಾಹು । ದೇತಕೆ ಚರಾಚರವ್ರಾತ ನಿಶ್ಚಲವಿಲ್ಲಿ । ಈತಪೋವನಪಾಳುವೋಯ್ತದೆಂತದ ಗುರುವೆ ನೀಪ್ಪೆಳುಹಿರೆನೆ ಕುಶಿಕಜ ॥ ೧ ॥

ಭಾಮಿನಿ

ನುಡಿವೆಬಾರೆನುತೊಂದು ಬಂಡೆಯ । ನೆಡವಿ ಬೀಳಲು ಕಂಡು ರಾಮನು । ಕಡುಮುಳಿದು ಪಥಕೆಡರನಿದ ಕಿತ್ತಿಡುವೆನೆಂದೆನುತ ॥ ಝಡಿದು ಕಾಲಿಂದೊದೆದ ಮಾತ್ರದಿ । ನುಡಿಯಲೇ ನಚ್ಚರಿಯ ತಚ್ಛಿಲೆ । ಯಡಗಿಯೋಗಿನಿಯಾಗುತೆದ್ದಳು ಮಡದಿಯಾಹಲ್ಯೆ ॥ ೧ ॥

Scanned by CamScanner

ಕಂದಪದ್ಯ

ಧವಲದುಕೂಲದ ದಿವ್ಯಾಂ । ಗವ ಕಂಡೆರಗಿದ ರಘುಪುಂಗವ ಭಕ್ತಿಯೊಳಂ ॥ ತವಸಿನಿ ಪೂರ್ವಸ್ಮೃತಿಯಿಂ । ಸ್ರವಿಸುತ ಹರ್ಷಾಶ್ರುವ ರಾಘವಗೊಂದಿಸುತಂ ॥ ೧ ॥

ರಾಗ : ಸಾವೇರಿ ತಾಳ : ಆದಿ

ಪಾಹಿ ಪಂಕಜನಯನ । ಜಯತು ಮುಕ್ತಿ । ದೇಹಿ ವಾಸುಕಿಶಯನ ॥ ಪಲ್ಲ ॥ ಮಾಂವಿಹಗೇಂದ್ರ । ವಾಹನ ಶ್ರೀರಮಾ । ಮೋಹನನಖಿಲ ನಿ । ರ್ವಾಹನ ಜಯಜಯ ॥ ಅ. ಪ. ॥ ಪತಿಯಶಾಪದಿ ನಾನು । ಕಲ್ಲಾದೆನು । ಪತಿತಪಾವನ ನೀನು । ಸತಿಯ ಮೇಲ್ದಯೆಯಿಟ್ಟು । ಹುತಿಸಿದೆಮನಗೊಟ್ಟು ॥ ಗತಿಸಿತೊ ಯುಗವೆಷ್ಟು । ಚ್ಯುತನಿನಗೇಗೊತ್ತು ॥ ಪಾಹಿ ॥ ೧ ॥ ಹರಿಯೆ ನಿನ್ನಯ ಪಾದವ । ಸೋಂಕಿಸುತೆನ್ನ । ಹರಿಸಿದೆ ಭವ ಬಂಧವ ॥ ತರಳೆಯರಿಗೆ ಪತಿ । ಪರದೈವವಿನಿಯನ । ಬೆರೆದು ನಿನ್ನಲಿಸೇರ್ವ । ತೆರಗಯ್ಯೊ ಮಾಧವ ॥ ಪಾಹಿ ॥ ೨ ॥ ಎನುತಂಘ್ರಿಗ್ಗಣೆಯೊತ್ತಿದ । ಅಹಲ್ಯೆಯ । ಚಿನುಮಯಾತ್ಮಕನೆತ್ತಿದ ॥ ಘನಪತಿವ್ರತೆನಿನ್ನ । ನೆನೆವರ ದುರಿತವು । ಹನನವಾಗಲಿಯೆಂದಾ । ವನಜಾಕ್ಷ ಹರಸಿದ ॥ ಎನುತಂಘ್ರಿ ॥ ೩ ॥

ಭಾಮಿನಿ

ಮನದಿತಿಳಿದೈತಂದು ಗೌತಮ । ವನಜನಯನನನಪ್ಪಿ ತನ್ನಯ । ವನಿತೆಯಳ ಕಣ್ಣೊರಸಿ ಕರವಿಡಿದನಿಬರೊಡವೆರಸಿ ॥ ಮುನಿಗೃಹಕ್ಕೈತಂದು ಪೂಜಿಸಿ । ಚಿನುಮಯಂಗಾರತಿಯ ಬೆಳಗಿದ । ರಿನಿತಹಲ್ಯೋದ್ಧಾರವಾಯ್ತೆಂದನು ಮಹೇಶ್ವರನು ॥ ೧ ॥

ವಾರ್ಧಿಕ

ತೆರಳಿ ಮಿಥಿಲೆಗೆ ಮುಂದೆ ಮುರಿದು ಧನುವಂ ರಾಮ । ವರಿಸಿಜಾನಕಿಯ ಮಿಕ್ಕಿರುವ ಮೂತರಳೆಯರ । ಭರತಲಕ್ಷ್ಮಣ ಶತ್ರುಹರರಿಂಗೆ ಪರಿಣಯವ । ವಿರಚಿಸುತ ಪಿತನ ಮುಖದಿ ॥ ಬರುತಿರಲ್ ಸಾಕೇತ ಪುರಕೆ ಮಾರ್ಗದಿ ತಡೆದ । ಪರಶುಧಾರಿಯ ಗರ್ವಹರಿಸುತರಮನೆಗೈದಿ । ಹರುಷದಿಂದಿರ್ದ ಶ್ರೀ ಹರಿಯೊಲುಮೆ ಹದಿಮೂರ । ಕರಳಿತೀ ಕೃತಿಕುಸುಮವು ॥ ೧ ॥

ಭಾಮಿನಿ

ಸಾರ್ವಶಕ ಸಾವಿರದ ವಂಭೈ । ನೂರರಾಶ್ವಿಜಶುಕ್ಲದ । ಚಾರುವಿಜಯಾದಶಮಿಗಿದಸಂಪೂರ್ಣಗೊಳಿಸುತಲಿ ॥ ಭೂರಿ ಸಜ್ಜನ

ನಿಚಯಪದಪಂ । ಕೇರುಹಕ್ಕರ್ಪಣೆಯಗೈದನು । ದಾರಮತಿಯಲಿ ಮೆರೆವರಿಷ್ಟವ ಪೂರಯಿಪಹರಿಯು ॥ ೧ ॥

ಮಂಗಲಪದ್ಯ

ರಾಗ : ಧವಳಾರ ತಾಳ : ಏಕ

ಮಂಗಲಂ । ಜಯ । ಮಂಗಲಂ । ಮಂಗಲಂ ದಶರಥ ರಾಮನಿಗೆ । ಮಂಗಲ ಜಾನಕಿ ಪ್ರೇಮನಿಗೆ ॥ ಮಂಗಲ ಮನುಜೋದ್ಧಾಮಗೆ ಜಯಜಯ । ಮಂಗಲ ಮೇಘಶ್ಯಾಮನಿಗೆ ॥ ಮಂಗಲ ॥ ೧ ॥

❖ ಸಂಪೂರ್ಣಂ ❖

Scanned by CamScanner

ಬೆಳಸಲಿಗೆಯವರನ್ನು ಕುರಿತು....

ಅರ್ಥದಾರಿ, ವೇಷಧಾರಿ, ಮೇಳ ಸಂಘಟಕ, ಪ್ರಸಂಗಕರ್ತ - [illegible] ನೆಲೆಗಳಲ್ಲಿ ಯಕ್ಷಗಾನ ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸಿರುವ ಬೆಳಸಲಿಗೆ ಗಣಪತಿ ಹೆಗಡೆಯವರು ಓರ್ವ ಛಲವಾದಿ ಸಾಧಕ. ಅರ್ವಾಚೀನಯುಗದ ಪ್ರಮುಖ ಯಕ್ಷಗಾನ ಕವಿಗಳಲ್ಲೊಬ್ಬರಾದ ಇವರ ಪ್ರಸಂಗಗಳು ವಸ್ತುವೈವಿಧ್ಯ, ಸಾಂಪ್ರದಾಯಿಕ ರೂಪ, ಪ್ರಾಯೋಗಿಕತೆ, ಮಾಧ್ಯಮ ಅನ್ವಯಗಳಲ್ಲಿ ಗಮನಾರ್ಹವಾಗಿವೆ. ಸಾಂಪ್ರದಾಯಿಕತೆಯೊಂದಿಗೆ ವಿಭಿನ್ನತೆಯನ್ನು ಸಮನ್ವಯಗೊಳಿಸಲು ಬೆಳಸಲಿಗೆಯವರು ಯತ್ನಿಸಿದ್ದಾರೆ.

-ಡಾ|| ಎಂ. ಪ್ರಭಾಕರ ಜೋಶಿ

ಬೆಳಸಲಿಗೆ ಗಣಪತಿ ಹೆಗಡೆ ಯಕ್ಷಗಾನ ಪ್ರಪಂಚದಲ್ಲಿ ಅನ್ಯಾದೃಶ ಕವಿ. ಅವರ ಕಾವ್ಯ ಹೊಸೆದದ್ದಲ್ಲ. ತಾನಾಗಿಯೇ ಹೊರಹೊಮ್ಮಿದ ಕಾವ್ಯಧಾರೆ. ಯಕ್ಷಗಾನ ವಸ್ತುನಿಷ್ಠ ಕಾವ್ಯವಾಗಿದ್ದರೂ ಕವಿ ಭಾವತುಂಬಿ ಹಾಡಿದ್ದನ್ನು ಇಲ್ಲಿ ಕಾಣಬಹುದು. ಪ್ರತಿ ಪದ್ಯವೂ ರಸಭಾವಗಳಿಂದ ಪುಷ್ಟಿಗೊಂಡಿರುವುದು ಕವಿಯ ಅನನ್ಯ ಪ್ರತಿಭೆಗೆ ನಿದರ್ಶನ.

- ಕಾಶ್ಯಪ ಪರ್ಣಕುಟಿ

Scanned by CamScanner